© 2024 IJNRD | Volume 9, Issue 4 April 2024| ISSN: 2456-4184 | IJNRD.ORG

IJNRD.ORG ISSN : 2456-4184
INTERNATIONAL JOURNAL OF NOVEL RESEARCH AND DEVELOPMENT (IJNRD) | IJNRD.ORG
An International Open Access, Peer-reviewed, Refereed Journal

# ಮೈಸೂರು ಒಡೆಯರ ಕಾಳದ ಸೈನಿಕ ವ್ಯವಸ್ಥೆ

**ಡಾ. ನಾಗೇಶ ಹೆಚ್.ಎ**
ಹನುಮಾಪುರ
ಕಲ್ಯಾ ಅಂಚೆ
ಮಾಗಡಿ ತಾ॥
ರಾಮನಗರ ಜಿ॥ 562120

ಪ್ರಾಚೀನ ಭಾರತದ ಹಲವಾರು ರಾಜಕೀಯ ಚಿಂತಕರಾದ ಕೌಟಿಲ್ಯನ ಅರ್ಥಶಾಸ್ತ್ರ, ಕಮಂದಕನ ನೀತಿಶಾಸ್ತ್ರ, ಶುಕ್ರನ ನೀತಿಸಾರ, ಸೋಮೇಶ್ವರನ ಮಾನಸೋಲ್ಲಾಸ, ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ, ಮನುಸ್ಮೃತಿಗಳು ಹಾಗೂ ಪುರಾಣಗಳಾದ ಯಾಜ್ಞವಲ್ಕ್ಯ ಸ್ಮೃತಿ ಮತ್ತು ಅಗ್ನಿ ಪುರಾಣಗಳು ಸೈನ್ಯದ ಬಗ್ಗೆ ವಿವರವಾಗಿ ತಿಳಿಸುತ್ತವೆ. ಕೌಟಿಲ್ಯನು 'ದಂಡದ ಭಯದಿಂದಲೇ ರಾಷ್ಟ್ರದ ಗಡಿಗಳು ಸುರಕ್ಷಿತವಾಗಿರುತ್ತವೆ' ಎಂದು ತನ್ನ ಅರ್ಥಶಾಸ್ತ್ರ ಕೃತಿಯಲ್ಲಿ ತಿಳಿಸಿದ್ದಾನೆ. ರಾಜನು ರಾಜ್ಯಾದಾಯದ ಒಟ್ಟು ಉತ್ಪನ್ನದಲ್ಲಿ 1/4 ಭಾಗವನ್ನು ಸೈನ್ಯಕ್ಕೆ ಮೀಸಲಿಡಬೇಕೆಂದು ಶುಕ್ರನು ತನ್ನ ನೀತಿಸಾರದಲ್ಲಿ ತಿಳಿಸುತ್ತಾನೆ.[2]

ಸೈನಿಕ ವ್ಯವಸ್ಥೆ ಎಂದರೆ ಶಿಸ್ತು, ಸಂಯಮ, ಕಟ್ಟುನಿಟ್ಟಿನ ಕಾನೂನುಗಳಿಂದ ರೂಪಿತವಾದಂತಹ ಒಂದು ಕ್ರಮಬದ್ಧವಾದ ಸ್ಥಿತಿ. ಸೈನ್ಯ ಮತ್ತು ಯುದ್ಧದ ತಾತ್ವಿಕ ಪರಿಕಲ್ಪನೆಗಳು, ಅರ್ಥ, ವ್ಯಾಪ್ತಿ ಸ್ವರೂಪವನ್ನು ಅತ್ಯಂತ ಕ್ರಮಬದ್ಧವಾದ ಶಿಸ್ತಿನ ಕ್ರಮಗಳ ಆಧಾರದ ಮೇಲೆ ರೂಪುಗೊಂಡಿರುವುದೇ ಆಗಿದೆ. ಈ ವ್ಯವಸ್ಥೆಯಲ್ಲಿ ಸೈನ್ಯಪಡೆ, ಶಸ್ತ್ರಾಸ್ತ್ರಗಳು, ರಕ್ಷಣಾ ಸಾಧನಗಳು, ರಕ್ಷಣಾತಂತ್ರ ಮತ್ತು ಅದರ ಮೂಲಭೂತ ವಿಧಿವಿಧಾನಗಳನ್ನು ಒಳಗೊಂಡಿರುತ್ತದೆ.

## ಸೈನಿಕ ವ್ಯವಸ್ಥೆಯ ಪರಿಕಲ್ಪನೆ

ನಾಗರೀಕತೆಗಳು ಬಲಿಷ್ಠವಾಗಿ ರೂಪುಗೊಂಡಂತೆ ಅವು ತಮ್ಮ ಬಲವನ್ನು ದುರ್ಬಲ ಸಮುದಾಯಗಳ ಮೇಲೆ ಪ್ರಯೋಗಿಸಿ ಅವುಗಳನ್ನು ಅವನತಿಯತ್ತ ಕೊಂಡೊಯ್ದವು. ಪರರ ಆಕ್ರಮಣಗಳಿಂದ ಸೋತು ಅವರ ದಾಸ್ಯದಲ್ಲಿ ಬದುಕಬೇಕಾಗಿತ್ತು. ಮುಂದೆ ಇದು ಆಕ್ರಮಣಗಳಿಗೆ ದಾರಿ ಮಾಡಿಕೊಟ್ಟಿತ್ತು. ವಿವಿಧ ಕಾರಣ ಗಳಿಂದಾಗಿ ಒಬ್ಬರ ಮೇಲೆ ಮತ್ತೊಬ್ಬರು ದಾಳಿ ಮಾಡುವಂತಹ ಅವಕಾಶವನ್ನು ಒದಗಿಸಿತ್ತು.[3] ಒಂದು ಸಮುದಾಯದ ಜನರಿಂದ ನೇರವಾಗಿ ಆಯ್ಕೆಯಾದ ಮುಖ್ಯಸ್ಥನು ಅಧಿಕಾರವನ್ನು ವಹಿಸಿಕೊಂಡು ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ರಾಜಕೀಯ ಪ್ರಜ್ಞಬುದ್ಧತೆಗಳೇ ಪ್ರಮುಖ ಕಾರಣವಾಗಿದ್ದವು. ಯುದ್ಧ, ಆಕ್ರಮಣ ಅಥವಾ ದಾಳಿಗಳಿಗೆ ಆ ಸಮುದಾಯದ ಮುಖ್ಯಸ್ಥ ಅಥವಾ ಅರಸನೇ ಪ್ರಮುಖವಾದ ಕಾರಣ. ಕಲಹ ಅಥವಾ ಘರ್ಷಣೆಗಳ ಸಮಯದಲ್ಲಿ ಜನರು ತಮ್ಮಲ್ಲಿ ಅತ್ಯಂತ ಬಲಶಾಲಿಯಾದವನನ್ನು ಮಾತ್ರ ನಾಯಕನನ್ನಾಗಿ ಆಯ್ಕೆಮಾಡಿಕೊಳ್ಳುತ್ತಿದ್ದರು. ಅಲ್ಲದೆ ಉಳಿದವರು ಅವನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿತ್ತು. ಇಲ್ಲದಿದ್ದರೆ ಮರಣದಂಡನೆಯಂತಹ ಉಗ್ರಶಿಕ್ಷೆಗಳಿಗೆ ಗುರಿಯಾಗುತ್ತಿದ್ದರು. ಹೆಚ್ಚಿನ ಬುಡಕಟ್ಟುಗಳಲ್ಲಿ ರಾಜನೇ ಶಾಶ್ವತವಾದ ಸರ್ಕಾರವಾಗಿದ್ದು ಸೈನಿಕ, ತಂದೆ, ಪುರೋಹಿತ ಮತ್ತು ರಾಜ ಎಲ್ಲರೂ ಸೇರಿ ಅಧಿಕಾರ ಪ್ರಾರಂಭವಾಗುತ್ತಿತ್ತು. ಸಮಾಜವನ್ನು ಎರಡು ಶಕ್ತಿಗಳು ಆಳುತ್ತವೆ. ಅವುಗಳೆಂದರೆ ಒಂದು ಸರ್ಕಾರ, ಮತ್ತೊಂದು ಬಲಿಷ್ಠತೆ. ಅವುಗಳೆಂದರೆ 'ಶಾಂತಿ ಸಮಯದಲ್ಲಿ ಮಾತು, ಸಂತೋಷದ ಸಮಯದಲ್ಲಿ ಖಡ್ಗ'. ಅರಸನ ಅಭಿಪ್ರಾಯಗಳನ್ನು ಜನರು ಕೇಳದೆ ಹೋದಾಗ ಮಾತ್ರ ಸರ್ಕಾರ ಅಥವಾ ಪ್ರಭುತ್ವದಿಂದ ಬಲಪ್ರಯೋಗದ ಅನಿವಾರ್ಯತೆಯಾಗುತ್ತಿತ್ತು.

**ಸೇನಾಬಲ**

ಬಲ ಎಂಬುದು ಪ್ರಾಚೀನ ಕಾಲದಿಂದಲೂ ರಾಜ್ಯ ರಕ್ಷಣೆಯ ಸಪ್ತಾಂಗಗಳಲ್ಲಿ ಒಂದಾಗಿತ್ತು. ರಾಜನಾದವನು ತನ್ನ ಸ್ವಾರ್ಥದಿಂದ ಕೂಡಿದ ಮತ್ತು ಕ್ರೂರವಾದ ಇಚ್ಛೆಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ರಾಜ್ಯದ ಮೇಲೆ ಆಕ್ರಮಣದಂತಹ ಸಮಯಗಳಲ್ಲಿ ರಕ್ಷಣೆಗಾಗಿ ಬಲಿಷ್ಠ ಸೇನಾಬಲವನ್ನು ವ್ಯವಸ್ಥಿತವಾಗಿ ಸಜ್ಜುಗೊಳಿಸುವುದು ಅನಿವಾರ್ಯವಾಗಿರುತ್ತಿತ್ತು. ಯುದ್ಧಗಳಲ್ಲಿ ಜಯಪಡೆಯುವುದು ಕೂಡ ಅಗತ್ಯವಾಗಿತ್ತು. ರಾಜ್ಯದ ಅಸ್ತಿತ್ವದ ಮೇಲೆ ಸಾಮ, ದಾನ, ಬೇಧಗಳಿಗಿಂತ ದಂಡವೇ ಪ್ರಧಾನವಾಗಿರುತ್ತಿತ್ತು.[4] ಭಾರತದ ಪ್ರಾಚೀನ ಮಹಾಕಾವ್ಯಗಳು ಸೈನ್ಯವನ್ನು ಎಂಟು ಭಾಗಗಳಾಗಿ ವಿಭಾಗಿಸುತ್ತವೆ. ಅದರಲ್ಲಿ ಪ್ರಮುಖವಾಗಿ ರಾಮಾಯಣವು ರಥಾರೋಹಿ, ಗಜಾರೋಹಿ, ಅಶ್ವಾರೋಹಿ, ನೌಕಾರೋಹಿ, ಪಾದಚಾರಿ, ವಿಷ್ಟಿ(ಭಾರವಾಹಕ), ಗುಪ್ತಚರ ಮತ್ತು ಉಪದೇಶಕವೆಂದು ತಿಳಿಸುತ್ತದೆ. ಮೈಸೂರು ಒಡೆಯರ ಕಾಲದಲ್ಲಿ ರಚನೆಯಾದ ಹಲವಾರು ಸಾಹಿತ್ಯ ಕೃತಿಗಳು ಸೇನಾಬಲವನ್ನು ಮಾಹಿತಿಯನ್ನು ಒದಗಿಸುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯಂ', ನಂಜಪ್ಪ ಕವಿಯ 'ಕೃಷ್ಣರಾಜ ವಿಲಾಸ', ತಮ್ಮಯ್ಯ ಶಾಸ್ತ್ರಿ ರಚಿಸಿದ 'ರಾಜವಂಶ ರತ್ನಪ್ರಭ', ಲಿಂಗಣ್ಣಕವಿಯ 'ಕೆಳದಿ ನೃಪವಿಜಯ', ಮುಂತಾದ ಕೃತಿಗಳು ಅಂದಿನ ಸೇನಾಬಲ, ಯುದ್ಧಗಳು, ಯುದ್ಧದ ಪ್ರಕಾರಗಳು, ಸೈನಿಕರ ಹೋರಾಟ, ಸೈನಿಕರ ವೇಷಭೂಷಣ, ಆಯುಧಗಳ ಬಳಕೆ, ಸೈನಿಕರ ಆಹಾರ ಪದಾರ್ಥಗಳು ಮುಂತಾದ ವಿಚಾರಗಳನ್ನು ಕುರಿತು ಮಾಹಿತಿಯನ್ನು ಒದಗಿಸುತ್ತವೆ.

ಮೈಸೂರು ಒಡೆಯರ ಆರಂಭಿಕ ಕಾಲಾವಧಿಯಲ್ಲಿ ಸೈನಿಕ ಬಲದ ಮಾಹಿತಿಗಳು ಅಷ್ಟಾಗಿ ತಿಳಿದುಬರುವುದಿಲ್ಲ. ಕಾರಣ ಹದಿನಾಡನ್ನು ಆಳುತ್ತಿದ್ದ ಚಾಮರಾಜನೆಂಬ ಸಣ್ಣ ಪಾಳೆಯಗಾರನಿಗೆ ಸೇರಿದ ಚಿಕ್ಕ ಪಾಳೆಯಪಟ್ಟಾಗಿತ್ತು. ಕ್ರಿ.ಶ.1578ರಲ್ಲಿ ರಾಜಒಡೆಯರು ಅಧಿಕಾರಕ್ಕೆ ಬರುವವರೆಗೆ ಮೈಸೂರು ಒಡೆಯರ ಕಾಲಕ್ಕೆ ಸಂಬಂಧಿಸಿದ ಸೇನಾಬಲ ಕುರಿತ ಯಾವುದೇ ಉಲ್ಲೇಖಗಳು ಕಂಡುಬರುವುದಿಲ್ಲ. ವಿಜಯನಗರದ ಕೊನೆಯ ರಾಜಪ್ರತಿನಿಧಿಯಾಗಿದ್ದ ಶ್ರೀರಂಗರಾಯನು ಅಧಿಕಾರದಿಂದ ಪದಚ್ಯುತವಾಗುವ ಮುಂಚೆ ರಾಜಒಡೆಯರು ಕೇವಲ 300 ಜನ ಸೈನಿಕರನ್ನು ಮಾತ್ರ ಹೊಂದಿದ್ದರು.[5] ಅಲ್ಲದೆ ಶ್ರೀರಂಗರಾಯ (ತಿರುಮಲರಾಯ)ನನ್ನು ಶ್ರೀರಂಗಪಟ್ಟಣದಿಂದ ಹೊರಹಾಕಿದ ನಂತರ ತಾವೇ ನೇರ ಮತ್ತು ಸ್ವತಂತ್ರವಾಗಿ ಆಳ್ವಿಕೆಯನ್ನು ಪ್ರಾರಂಭಿಸಿ ಮೈಸೂರಿನ ರಾಜಕೀಯ ಇತಿಹಾಸದಲ್ಲಿ ಪ್ರಥಮ ಅರಸರಾಗಿ ಸಿಂಹಾಸನ ಏರಿದರು.

ಕ್ರಿ.ಶ.1610ರಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಲ್ಲಿ ಆಚರಿಸುತ್ತಿದ್ದ ನವರಾತ್ರಿ ಉತ್ಸವವನ್ನು ರಾಜಒಡೆಯರು ಮೈಸೂರಿನಲ್ಲಿ ಪ್ರಾರಂಭಿಸಿ ತಮ್ಮ ಸೇನಾಬಲವನ್ನು ಈ ಉತ್ಸವದಲ್ಲಿ ಪ್ರದರ್ಶಿಸಿದರು.[6] ಅದಕ್ಕೆ ಕಾರಣವೆಂದರೆ ಅರಸನು ಪ್ರಮುಖ ಹುದ್ದೆಯನ್ನು ಹೊಂದಿದ್ದರೆ ಅನಂತರದ ಸ್ಥಾನವು ದಳವಾಯಿಯದ್ದಾಗಿತ್ತು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಪ್ರಜೆಗಳು ಪಾಳೆಯಗಾರರು ಮತ್ತು ಅಧಿಕಾರಿಗಳಿಗೆ ತಮ್ಮ ಸೇನಾಬಲದ ಮನವರಿಕೆ ಮಾಡಿಕೊಡುವ ಪ್ರಯತ್ನವಾಗಿತ್ತು. ಸೈನ್ಯದಲ್ಲಿದ್ದ ಅಶ್ವದಳ, ಗಜದಳ, ಒಂಟೆಗಳು, ಕಾಲಾಳು ಪಡೆಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದವು. ಅರಸರು ತಾವು ಬಳಸುತ್ತಿದ್ದ ಎಲ್ಲಾ ಆಯುಧಗಳನ್ನು ಪೂಜಿಸಿ, ತಮ್ಮ ಸೇನಾಬಲವನ್ನು ಉತ್ಸವದಲ್ಲಿ ಪ್ರದರ್ಶಿಸಿ, ತಮ್ಮ ಪ್ರಜೆಗಳ ಸಮ್ಮುಖದಲ್ಲಿಯೇ ಜಟ್ಟಿಕಾಳಗವನ್ನು ಮಾಡಿಸಿದರು. ಇದು ತಾವು ಸಂಪಾದಿಸಿರುವ ಸೇನಾಬಲ ಮತ್ತು ಆಯುಧಗಳನ್ನು ಪ್ರದರ್ಶಿಸಿ ಅವುಗಳನ್ನು ಸೈನ್ಯದಲ್ಲಿ ಬಳಸಿಕೊಳ್ಳುವ ವಿಧಾನವಾಗಿತ್ತು.

ಅರಸನು ರಾಜ್ಯಾಡಳಿತದಲ್ಲಿ ತನ್ನ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು, ಯುದ್ಧ ಮತ್ತು ಶಾಂತಿಯ ಸಮಯದಲ್ಲಿ ಸೈನ್ಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಒಬ್ಬ ಸೈನ್ಯಾಧಿಕಾರಿಯ ಅಗತ್ಯವನ್ನು ಮನಗಂಡು ದಂಡನಾಯಕನನ್ನು "ದಳವಾಯಿ" ಎಂಬ ಹೆಸರಿನಿಂದ ನೇಮಕ ಮಾಡಿದರು. ಈ ಹಿಂದೆ ಅರಸನು ದಂಡಾಧಿಕಾರಿಯಾಗಿ ಸೈನ್ಯದ ಮುಂದಾಳತ್ವವನ್ನು ನಿರ್ವಹಿಸುವ ಕಾರ್ಯವನ್ನು ಸುಲಭಗೊಳಿಸುವ ಸಲುವಾಗಿ ದಳವಾಯಿಗೆ ಅಧಿಕಾರವನ್ನು ವಹಿಸಿಕೊಡಲಾಯಿತು. ಈ ಅಧಿಕಾರದಿಂದ ದಳವಾಯಿಯ ಸ್ಥಾನಮಾನದ ಜೊತೆಗೆ ಆಡಳಿತದಲ್ಲಿ ಆತನ ಜವಾಬ್ದಾರಿಯನ್ನು ಹೆಚ್ಚಿಸಿತು. ಈತನು ಯುದ್ಧ ಮತ್ತು ಶಾಂತಿ ಕಾಲದಲ್ಲಿ ಅರಸನಿಗೆ ನೆರವಾಗುವುದು ಅಗತ್ಯವಾಗಿತ್ತು. ಆದ್ದರಿಂದ ರಾಜಒಡೆಯರು ಕರಿಕಾಲ ಮಲ್ಲರಾಜಯ್ಯನನ್ನು[7] ದಳವಾಯಿಯನ್ನಾಗಿ ನೇಮಿಸಿದರು. ಆದರೆ ಆತ ತಾನು ಊರಿಗೆ ಹೋಗಿ ಬರುತ್ತೇನೆಂದು ಹೇಳಿ ಮರಳಿ ಬಾರಲೇ ಇಲ್ಲ. ಈತನ ಅನುಪಸ್ಥಿತಿಯಲ್ಲಿ ಬೆಟ್ಟದರಸಿನವರು ದಳವಾಯಿಯಾಗಿ ಅಧಿಕಾರವನ್ನು ನಿರ್ವಹಿಸಿದರು. ಆದರೆ 4ನೆಯ ಚಾಮರಾಜ ಒಡೆಯರು ಮೊದಲನೆಯ ಬಾರಿಗೆ ದಳವಾಯಿಗಳನ್ನು ಬದಲಾಯಿಸುವ ಕಾರ್ಯಕ್ಕೆ ಕೈಹಾಕಿದರು. ರಾಜಒಡೆಯರು ಅರಮನೆಯ ಆಡಳಿತದಲ್ಲಿ ದಳವಾಯಿಯ ಅಧೀನವಾಗಿರುವಂತೆ 23 ಚೂಳಿಗ ಅಥವಾ ಸೇವಾ ವಿಭಾಗಗಳನ್ನು ಪ್ರಾರಂಭಿಸುವ ಮುಖಾಂತರ ಸೈನ್ಯಕ್ಕೆ ಹೆಚ್ಚಿನ

ಸಂಖ್ಯೆಯಲ್ಲಿ ದಿನನಿತ್ಯದ ಸೇವಾ ಜನರನ್ನು ನೇಮಕ ಮಾಡಿಕೊಂಡರು. ಈ ಸೇವಾ ವಿಭಾಗಗಳಲ್ಲಿ ಸಂಚಿಯ ಊಳಿಗ, ಚಂಬಿನ ಊಳಿಗ, ಕತ್ತಿಯ ಊಳಿಗ, ಕಾರಂಜಿಯ ಊಳಿಗ, ಪಡಿಗದ ಊಳಿಗ, ಕನ್ನಡಿಯ ಊಳಿಗ, ಕುಂಚದ ಊಳಿಗ, ಕೈಯಾಲವಟ್ಟದ ಊಳಿಗ, ಪಟ್ಟೆಪಾದುಕೆಯ ಊಳಿಗ, ಹಾಸಿಗೆಯ ಊಳಿಗ, ಹಾವುಗೆಯ ಊಳಿಗ, ಬಿಡಾರದ ಊಳಿಗ, ಉಭಯ ಚಾಮರದ ಊಳಿಗ, ಕರಗದ ಊಳಿಗ, ತೂಗುನೀರಿನ ಊಳಿಗ, ಬೀಸಣಿಗೆಯ ಊಳಿಗ, ತೆರಿಗೆಯ ಊಳಿಗ, ತೆರೆಯ ಊಳಿಗ, ನೀರಿನಮನೆ ಊಳಿಗ, ಹಿತ್ತಲು ಮನೆಯ ಊಳಿಗ, ಅವಸರದ ಊಳಿಗ, ರಜದ ಊಳಿಗ, ಕಾವಲು ಊಳಿಗಗಳು[8] ಪ್ರಮುಖವಾಗಿದ್ದವು.

4ನೆಯ ಚಾಮರಾಜ ಒಡೆಯರು (ಕ್ರಿ.ಶ.1617–1637) ಶ್ರೀರಂಗಪಟ್ಟಣದ ಉತ್ಸವದಲ್ಲಿ ಪಡೆದ ಬಿರುದುಗಳೇ ಅವರ ಶಕ್ತಿ ಸಾಮರ್ಥ್ಯಗಳನ್ನು ಎತ್ತಿಹಿಡಿಯುತ್ತವೆ. ವೀರಶೂರ, ಮಲೆಪರಗಂಡ, ಅಭಯ ಪತ್ರಪಾದೀಶ್ವರ, ಶರಣಾಗತ ಪರಿಪಾಲಕ[9] ಎಂಬ ಬಿರುದುಗಳಿಂದ ಅವರ ಪರಾಕ್ರಮ ತಿಳಿಯುತ್ತದೆ. ಅಲ್ಲದೆ ದಳವಾಯಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳದಂತೆ ಅವರನ್ನು ಬದಲಾಯಿಸಿದರು.

### ಸೇನಾ ವಿಭಾಗಗಳು

ಮೈಸೂರು ಒಡೆಯರು ಪ್ರಾರಂಭದಲ್ಲಿ ಸಾಂಪ್ರದಾಯಿಕ ಸೈನ್ಯಪದ್ಧತಿಯನ್ನೇ ಹೊಂದಿದ್ದರು. ಸಾಮ್ರಾಜ್ಯದ ಗಡಿಯು ವಿಸ್ತರಿಸಿದಂತೆ ಸೇನಾಬಲದಲ್ಲಿ ವಿವಿಧ ರೀತಿಯ ಬದಲಾವಣೆಗಳನ್ನು ಮಾಡಿಕೊಳ್ಳುವ ಅವಕಾಶವು ದೊರೆಯಿತು. ಇದಕ್ಕೆ ಪ್ರಮುಖವಾದ ಕಾರಣ ಬದಲಾದ ಕಾಲಘಟ್ಟದಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಮತ್ತು ಯುದ್ಧತಂತ್ರಗಳೇ ಕಾರಣವಾಗಿದ್ದವು. ಆದರೂ ಸಹ ಇವರು ತಮ್ಮ ಸೇನಾಬಲದಲ್ಲಿ ಸಾಂಪ್ರದಾಯಿಕ ಸೇನಾ ವಿಭಾಗಳನ್ನೇ ಪ್ರಾರಂಭದಲ್ಲಿ ಬಳಸಿದ್ದರು. ನಂತರ ಫ್ರೆಂಚರ ಸಹಾಯದಿಂದ ಯೂರೋಪಿನ ತಂತ್ರಜ್ಞಾನವನ್ನು ಮೈಸೂರಿನ ಸೈನ್ಯದಲ್ಲಿ ಅಳವಡಿಸಿಕೊಂಡರು. ಮುಂದೆ ಈ ತಂತ್ರಜ್ಞಾನವು ಹೈದರ್ ಅಲಿಯ ಕಾಲದಲ್ಲಿ ಆಧುನಿಕ ಕ್ಷಿಪಣಿಗಳ ಉದಯ ಮತ್ತು ಕ್ರಾಂತಿಗೆ ಕಾರಣವಾಯಿತು. ಮೈಸೂರು ಸೈನ್ಯದಲ್ಲಿ ಕಾಲ್ದಳ, ಅಶ್ವದಳ, ಗಜದಳ, ಫಿರಂಗಿದಳ ಮೊಲಾದವುಗಳು ಸೇನಾ ವಿಭಾಗಗಳಾಗಿದ್ದವು. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

### ಕಾಲ್ದಳ

ಯುದ್ಧ ಭೂಮಿಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸಲು ಯಾವುದೇ ವಾಹನ ಅಥವಾ ಪ್ರಾಣಿಗಳ ಸಹಾಯವಿಲ್ಲದೆ ಬಿಲ್ಲು–ಬಾಣ, ಖಡ್ಗ, ಗುರಾಣಿ, ಈಟಿ, ಭರ್ಜಿಗಳನ್ನು ಹಿಡಿದು ಹೋರಾಡುತ್ತಿದ್ದ ಸೈನಿಕರ ಗುಂಪಿಗೆ ಕಾಲ್ದಳ ಎಂದು ಹೆಸರು. ವಿಜಯನಗರ ಕಾಲದಲ್ಲಿ ಕಾಲ್ದಳದ ಬಗ್ಗೆ ವಿದೇಶಿ ಪ್ರವಾಸಿಗನಾದ ಡೊಮಿಂಗೋ ಪೆಯಾಸನು, 'ಕಾಲ್ದಳದ ಬಗ್ಗೆ ಹೇಳಬೇಕೆಂದರೆ ವಿಜಯನಗರದಲ್ಲಿ ಅದು ಎಲ್ಲಾ ಗುಡ್ಡಗಳಲ್ಲಿ ಕಣಿವೆಗಳಲ್ಲಿ ಕಿಕ್ಕಿರಿದು ನೆರೆದ ರೀತಿಗೆ ಆ ನೋಟಕ್ಕೆ ಪ್ರಪಂಚದಲ್ಲೇ ಎಣೆಯಿರಲಿಲ್ಲ. ಅವರು ಹಿಡಿದಿದ್ದ ಕತ್ತಿ, ಗುರಾಣಿಗಳ ಅಲಂಕಾರ ಅದ್ಭುತವಾಗಿತ್ತು[10] ಎಂದಿದ್ದಾನೆ. ವಿಜಯನಗರ ಸಾಮ್ರಾಜ್ಯದಲ್ಲಿ ಬೃಹತ್ ಪ್ರಮಾಣದ ಕಾಲ್ದಳವಿದ್ದಿತು. ಪ್ರಾರಂಭದಿಂದ ರಾಮರಾಯನ ಕಾಲದವರೆಗೂ ಆಗಾಧ ಪ್ರಮಾಣದಲ್ಲಿದ್ದಿತು. ಇದನ್ನು ಕಣ್ಣಾರೆ ಕಂಡು ಹೊಗಳಿದ ಹಲವಾರು ಜನ ವಿದೇಶಿ ಪ್ರವಾಸಿಗರೂ ಇದ್ದಾರೆ. ಆದರೆ ಮೈಸೂರು ಒಡೆಯರಿಗೆ ಸಂಬಂಧಿಸಿದಂತೆ ಈ ರೀತಿಯಾದ ಯಾವುದೇ ದೇಶೀಯ ಅಥವಾ ವಿದೇಶೀಯ ಬರವಣಿಗೆಗಳು ಕಂಠೀರವ ನರಸರಾಜ ಒಡೆಯರ ಕಾಲದವರೆಗೆ ಸ್ಪಷ್ಟಪಡುವುದಿಲ್ಲ. ಪ್ರಾರಂಭದಲ್ಲಿ ಮೈಸೂರು ಒಡೆಯರು ಮಾತ್ರ ಕೇವಲ ಬೆರಳೆಣಿಕೆಯಷ್ಟು ಜನ ಕಾಲ್ದಳವನ್ನು ಹೊಂದಿದ್ದರು.

ಮೈಸೂರಿನ ಕಾಲ್ದಳದಲ್ಲಿ ಸೈನಿಕರು ಖಡ್ಗ, ಗುರಾಣಿ, ಭಲ್ಲೆ, ಬಿಲ್ಲು, ಬಾಣ, ಬಂದೂಕು ಮೊದಲಾದ ಆಯುಧಗಳನ್ನು ಹೊಂದಿದ್ದರು. ಕಂಠೀರವ ನರಸರಾಜ ಒಡೆಯರು ಕಾಲ್ದಳವನ್ನು ಸದಾ ಸಿದ್ಧವಾಗಿರುವಂತೆ ನಿಯಮಗಳನ್ನು ರೂಪಿಸಿದರು. ಸೈನ್ಯದ ದಂಡನಾಯಕನಾದ ದಳವಾಯಿಯು ಮುಖ್ಯಸ್ಥನಾಗಿದ್ದನು.[12] ಈತ ಕಾಲ್ದಳದಲ್ಲಿ ಸುಬೇದಾರರು, ಜಮಾದಾರರು ಗುರಿಕಾರರು, ಓಲೆಕಾರರು, ಕೊಂಬಿನವರು, ಕಹಳೆಯವರು, ಗೂಢಾಚಾರರು ಮೊದಲಾದ ಶ್ರೇಣೀಕೃತವಾದ ಅಧಿಕಾರಿಗಳನ್ನು ನೇಮಿಸಿಕೊಂಡು ತಮ್ಮ ಕಾರ್ಯಕ್ಷೇತ್ರದ ಮಿತಿಯೊಳಗೆ ಮಾತ್ರ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆದರೆ ಒಡೆಯರ ಕೆಲವು ಸಮಕಾಲೀನವಾಗಿದ್ದ ಪಾಳೆಯಗಾರರಲ್ಲಿ ಈ ಕಾಲ್ದಳದಲ್ಲಿ ಬೇಡಪಡೆಗಳೇ ಅಧಿಕವಾಗಿದ್ದವು. ಬಿಜಾಪುರದ ರಣದುಲ್ಲಾಖಾನನು ಶ್ರೀರಂಗಪಟ್ಟಣದ ಮೇಲೆ ಆಕ್ರಮಣ ಮಾಡಿದಾಗ 90,000 ಅಶ್ವದಳಕ್ಕೆ ತಕ್ಕಂತೆ ಕಾಲ್ದಳವನ್ನು[13] ಹೊಂದಿದ್ದನು. ಗೋವಿಂದ ವೈದ್ಯನು ಕಂಠೀರವ ನರಸರಾಜ ವಿಜಯಂ ಎಂಬ ಕೃತಿಯಲ್ಲಿ ಶ್ರೀರಂಗಪಟ್ಟಣದ ಕೋಟೆ ಕಾಳಗಗಳಲ್ಲಿ ಈ ಕಾಲ್ದಳದ ಬಗ್ಗೆ ಸ್ಪಷ್ಟಪಡಿಸಿದ್ದಾನೆ.

ಈ ಕಾಲ್ಬಲವು ಶ್ರೀರಂಗಪಟ್ಟಣದ ಕೋಟೆ ಕಾಳಗದಲ್ಲಿ ಮದ್ದುಗುಂಡುಗಳನ್ನು ತುಂಬಿ ಫಿರಂಗಿಗಳನ್ನು ಹಾರಿಸಿತು. ಅಲ್ಲದೆ ಕೋಟೆ ಕಾಳಗದಲ್ಲಿ ಕೋಟೆಯ ಲಗ್ಗೆಯೇರಲು ಪ್ರಯತ್ನಿಸಿದಾಗ ಕೋಟೆಗೋಡೆಯ ಮೇಲಿನಿಂದ ಶತ್ರುಗಳ ಮೇಲೆ ಕಲ್ಲುಗುಂಡುಗಳು, ಕಾದಎಣ್ಣೆ, ಬಿಸಿಯಾದ ಮರಳು, ಅಂಬಲಿ ಮತ್ತು ಹೊಲಸನ್ನು ಬೀಳಿಸುವ ಮುಖಾಂತರ ಅವರನ್ನು ಹಿಮ್ಮೆಟ್ಟಿಸುವ ಕೆಲಸವನ್ನು ಮಾಡುತ್ತಿತ್ತು. ಶತ್ರು ಸೈನಿಕರ ಲಗ್ಗೆಯ ಪ್ರಯತ್ನವನ್ನು ತಡೆಯಿತು. ಈ ಲಗ್ಗೆಯ ನಂತರ ಸೈನ್ಯದ ಅವಶ್ಯಕತೆಯನ್ನು ಅರಿತು ಚಿಕ್ಕದೇವರಾಜ ಒಡೆಯರು ತಮ್ಮ ಕಾಲದಲ್ಲಿ ಕಾಲ್ದಳವನ್ನು ಒಂದು ಲಕ್ಷಕ್ಕೆ ಏರಿಸಿದರು.[14] ಏಕೆಂದರೆ ಆ ವೇಳೆಯಲ್ಲಿ ಸುತ್ತಮುತ್ತಲಿನ ಪಾಳೆಯಗಾರರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಮರಾಠರ ಆಕ್ರಮಣವೂ ಕೂಡ ಹೆಚ್ಚಾಯಿತು. ಇದರಿಂದ ಸಹಜವಾಗಿಯೇ ಕಾಲ್ದಳದ ಏರಿಕೆಯು ಅಗತ್ಯವಾಗಿತ್ತು.

ಶ್ರೀರಂಗಪಟ್ಟಣದ ಮೇಲೆ ಮರಾಠರ ಜಯಾಜಿ ಘಾಟ್ ಮತ್ತು ನಿಂಬಾಜಿ ಘಾಟ್ ಎಂಬ ಸಾಹುವಿನ ಮುಖ್ಯ ಸೇನಾ ನಾಯಕರು 60,000 ಅಶ್ವದಳ ಮತ್ತು ಅದಕ್ಕೆ ತಕ್ಕ ಕಾಲ್ದಳದೊಂದಿಗೆ ದಾಳಿ ಮಾಡಿದರು. ಆದರೆ ಒಡೆಯರು ಅತಿ ಕಡಿಮೆ ಸೈನ್ಯವನ್ನು ಹೊಂದಿದ್ದರೂ ಕೂಡ ಮರಾಠರನ್ನು ಹಿಮ್ಮೆಟ್ಟಿಸಿದರು. ಮೈಸೂರಿನ ಇತಿಹಾಸದಲ್ಲಿ ಒಬ್ಬ ಸಾಮಾನ್ಯ ಸೇವಕನಾಗಿದ್ದ ಹೈದರ್ ಅಲಿಯು ಸೈನ್ಯಕ್ಕೆ ಸೇರಿಕೊಂಡು ತನ್ನ ಪರಿಶ್ರಮದ ಮೂಲಕ ಮೈಸೂರಿನ ಆಡಳಿತದ ಚುಕ್ಕಾಣಿಯನ್ನು ಹಿಡಿದನು. ಈತ ಮೊದಲಿಗೆ ಕಾಲಾಳು ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದನು. 50 ಜನ ಭಲ್ಲೆಧಾರಿಗಳಲ್ಲಿ ಈತನೂ ಕೂಡ ಒಬ್ಬನಾಗಿದ್ದನು. ಹೈದರ್ ಅಲಿಯು ಪ್ರವರ್ಧಮಾನಕ್ಕೆ ಬಂದ ಸಂದರ್ಭದಲ್ಲಿ ಮೈಸೂರಿನ ಕಾಲಾಳು ಪಡೆಯ ಸೈನಿಕರು ಗೆರಿಲ್ಲಾ ಯುದ್ಧತಂತ್ರದಲ್ಲಿ ಪಳಗಿದರು. ಆದರೆ ಈ ಗೆರಿಲ್ಲಾ ಯುದ್ಧತಂತ್ರವು ಮೈಸೂರಿನ ಸೈನಿಕರಿಗೆ ಹೊಸದೇನೂ ಆಗಿರಲಿಲ್ಲ. ಏಕೆಂದರೆ ಕಂಠೀರವ ನರಸರಾಜ ಒಡೆಯರ ಕಾಲದಲ್ಲೇ ಅದು ಸೈನಿಕರಿಗೆ ಕರಗತವಾಗಿತ್ತು. ಹೈದರ್ ಅಲಿಯ ಕಾಲದಲ್ಲಿ ಕಾಲಾಳು ಪಡೆಯ ಇಲಾಖೆಯನ್ನು ಬಾರ್ ಇಲಾಖೆ ಎಂದು ಕರೆಯುತ್ತಿದ್ದರು. ಈ ಪದ್ಧತಿಯು ದಳವಾಯಿ ನಂಜರಾಜಯ್ಯನವರ ಆಡಳಿತದ ಅವಧಿಯಲ್ಲೇ ಅಸ್ತಿತ್ವದಲ್ಲಿತ್ತು. ಪ್ರಾರಂಭದ ಅವಧಿಯಲ್ಲಿ ಈ ಇಲಾಖೆಯಲ್ಲಿ ಕೇವಲ 1000 ಖಾಯಂ ಸೇವಕರಿದ್ದರು. ಹೈದರನ ಕಾಲಾವಧಿಯಲ್ಲಿ ಈ ಸಂಖ್ಯೆಯು 76,000ಕ್ಕೆ ಏರಿಸಲ್ಪಟ್ಟಿತು. ಇದರಲ್ಲಿ 22,000 ಮಂದಿಯನ್ನು ಆಯಾಯ ಕಿಲ್ಲೆಗಳಿಗೆ ನೇಮಿಸಲಾಗುತ್ತಿದ್ದರೆ. ಉಳಿದ 54,000 ಮಂದಿಯು ಯಾವಾಗಲೂ ಯುದ್ಧ ಸನ್ನದ್ಧವಾಗಿರುತ್ತಿದ್ದರು. ಈ ಕಾಲಾಳು ಪಡೆಯಲ್ಲಿ ಫಿರಂಗಿದಳದ ಎತ್ತುಗಳೂ, 96 ಫಿರಂಗಿಗಳೂ ಇದ್ದವು. ಹೈದರ್ ಅಲಿಯು ತಿರುಚನಾಪಳ್ಳಿಯ ಯುದ್ಧಕ್ಕೆ ಹೊರಟಾಗ ಸೈನ್ಯದಲ್ಲಿ 64,000 ಕಾಲಾಳು ಅಥವಾ ಬಾರಿನವರು ಅದರಲ್ಲಿ 60,000 ಬಾರ್ ಕಛೇರಿಯಲ್ಲಿನ ಸೈನಿಕರು ಮತ್ತು 4,000 ಕಡಪಾದ ಮೀರಲಿ ರಜಾಖಾನನ ಕಡೆಯ ಸೈನಿಕರಿದ್ದರು.[16]

ಹೈದರನು ಅಧಿಕಾರವನ್ನು ಪಡೆಯುವ ಮುಂಚೆ 1,000 ಬಾರ್‌ಇಲಾಖೆಯ ಖಾಯಂ ಸೇವಕನಾಗಿದ್ದನು. ಈತ ಅಧಿಕಾರಕ್ಕೆ ಬಂದ ನಂತರ ಬಾರ್ ಇಲಾಖೆಯ ಸೈನಿಕರನ್ನು 76,000ಕ್ಕೆ ಏರಿಸಿದನು. 22,000 ಮಂದಿಯನ್ನು ಆಯಾಯ ಕಿಲ್ಲೆಗಳು ಮತ್ತು ಇತರ ಸ್ಥಳಗಳಿಗೂ ನೇಮಿಸಲಾಗಿತ್ತು. ಇವರಲ್ಲಿ 54,000 ಮಂದಿ ಯಾವಾಗಲೂ ಯುದ್ಧ ಸನ್ನದ್ಧವಾಗಿರುತ್ತಿದ್ದರು. ಹೈದರ್ ಅಲಿಯು ಎರಡನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಮರಣ ಹೊಂದಿದಾಗ ಆತನ ಕಳೇಬರವಿದ್ದ ಶವಪೆಟ್ಟಿಗೆಯನ್ನು ಪೂರ್ಣಯ್ಯನವರು 1000 ಬಾರ್ ಇಲಾಖೆಯ ಸೇವಕರು ಮತ್ತು 500 ಅಶ್ವದಳದ ಸವಾರರ ಬಂದೋಬಸ್ತಿನಲ್ಲಿಟ್ಟು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು. ನಂತರ ಟಿಪ್ಪು ಸುಲ್ತಾನನು ಕ್ರಿ.ಶ.1792ರಲ್ಲಿ ಕೇವಲ 4,000 ಮಂದಿಯನ್ನು ಮಾತ್ರ ಉಳಿಸಿಕೊಂಡು ಕ್ರಿ.ಶ.1799ರ ವೇಳೆಗೆ ಈ ಸಂಖ್ಯೆಯನ್ನು 69,000ಕ್ಕೆ ಏರಿಸಿದನು. ಟಿಪ್ಪುವಿನ ಮರಣಾನಂತರ ಈ ಸಂಖ್ಯೆಯನ್ನು ಬ್ರಿಟಿಷರು ಕೇವಲ 2,270ಕ್ಕೆ ಇಳಿಸಿದರು. ಕ್ರಿ.ಶ.1802ರಲ್ಲಿ ಈ ಸಂಖ್ಯೆಯನ್ನು ಪುನಃ 3,000ಕ್ಕೆ ಏರಿಸಲಾಯಿತು.[16] ಆದರೆ ಈ ಸಂಖ್ಯೆಯನ್ನು ಕ್ರಿ.ಶ.1883ರ ನಂತರ ಇಳಿಕೆ ಮಾಡಲಾಯಿತು.

**ಅಶ್ವದಳ**

ಸೈನ್ಯದಲ್ಲಿ ಕುದುರೆಗಳು ಸಹ ಒಂದು ಭಾಗವಾಗಿದ್ದು ಇವುಗಳ ಪ್ರತ್ಯೇಕವಾದ ಒಂದು ಪಡೆಯಿತ್ತು. ಸೈನ್ಯದಲ್ಲಿ ಅಶ್ವದಳದ ಪಾತ್ರವು ಮಹತ್ವವಾಗಿದ್ದು, ಚಟುವಟಿಕೆಯುಳ್ಳದ್ದಾಗಿತ್ತು. ಈ ಪಡೆಯ ಕರ್ತವ್ಯಗಳನ್ನು ಕೌಟಲ್ಯನು ಸುದೀರ್ಘವಾಗಿ ವಿವರಿಸಿದ್ದಾನೆ. ಕುದುರೆಯ ಸೈನ್ಯವು ಶಿಬಿರವನ್ನು ಏರ್ಪಡಿಸುವ ಭೂಮಿಯಲ್ಲಿ ಶತ್ರುಸೈನ್ಯವನ್ನು ಓಡಿಸುವ, ಸೈನ್ಯವು ಬೀಡುಬಿಟ್ಟಲ್ಲಿ ಉಪದ್ರವ ಇಲ್ಲದಂತೆ ಮಾಡುವ, ದಾರಿಯಲ್ಲಿ ಸಿಕ್ಕುವ ಕಳ್ಳರನ್ನು ಓಡಿಸುವ ಕಾರ್ಯಗಳನ್ನು ಮಾಡಬೇಕು. ಶಿಬಿರಕ್ಕೆ ಯೋಗ್ಯವಾದ ಪ್ರದೇಶವನ್ನು ಮೊದಲು ಆಯ್ಕೆಮಾಡಿಕೊಳ್ಳಬೇಕು ಜಲಾಶಯಗಳನ್ನು ತಮಗೆ ಅನುಕೂಲವಾದ ಗಾಳಿಯುಳ್ಳ ಮತ್ತು ಎದುರಿಗೆ ಸೂರ್ಯರಶ್ಮಿ ಬೀಳದ ಪ್ರದೇಶವನ್ನು ಆಕ್ರಮಿಸುವುದು. ತಮ್ಮ ಶಿಬಿರಗಳಿಗೆ ಶತ್ರುಸೈನಿಕರು ಪ್ರವೇಶಿಸದಂತೆ ನೋಡಿಕೊಳ್ಳುವುದು.

ಶತ್ರುಸೈನ್ಯದೊಳಗೆ ಹೊಕ್ಕಿ ಅವರಲ್ಲಿ ಭಯವನ್ನು ಉಂಟುಮಾಡುವುದು. ಆಯಾಸದಿಂದ ಬಳಲಿದ ತನ್ನ ಸೈನ್ಯಕ್ಕೆ ಸಹಾಯ ಮಾಡುವುದು. ಶತ್ರು ಸೈನಿಕರನ್ನು ಹಿಂಬಾಲಿಸಿ ಬಂಧಿಸುವುದು. ಬಂಧಿಸಲ್ಪಟ್ಟ ತನ್ನವರನ್ನು ಬಿಡಿಸುವುದು. ಹಿಂದೆ, ಮುಂದೆ ಮತ್ತು ಪಾರ್ಶ್ವಗಳಿಂದ ಶತ್ರುಸೈನ್ಯಕ್ಕೆ ಹೊಡೆತವನ್ನು ನೀಡುವುದು ಸೋತ ಶತ್ರುಸೈನ್ಯವನ್ನು ಬೆನ್ನಟ್ಟುವುದು. ಚದುರಿರುವ ತನ್ನ ಸೈನ್ಯವನ್ನು ಒಂದುಗೂಡಿಸುವುದು. ಇವುಗಳೆಲ್ಲಾ ಅಶ್ವದಳವು ನಿರ್ವಹಿಸುತ್ತಿದ್ದ ಕಾರ್ಯಗಳಾಗಿವೆ.[17] ಕೌಟಲ್ಯನು ಹೇಳಿರುವ ಎಲ್ಲಾ ಕರ್ತವ್ಯಗಳು ಮೈಸೂರು ಒಡೆಯರ ಕಾಲಕ್ಕೂ ಪ್ರಸ್ತುತವಾಗಿದ್ದವು.

ಮೈಸೂರಿನ ಚರಿತ್ರೆಯ ಪುಟಗಳಲ್ಲಿ ರಾಜಒಡೆಯರು ಅಧಿಕಾರಕ್ಕೆ ಬರುವ ಮುಂಚೆ ಅಶ್ವದಳದ ಉಲ್ಲೇಖವೇ ನಮಗೆ ಸಿಗುವುದಿಲ್ಲ. ಕ್ರಿ.ಶ.1584ರಲ್ಲಿ ರಾಜ್ಯದ ಗಡಿಯನ್ನು ವಿಸ್ತರಿಸುವ ಪ್ರಯತ್ನದಲ್ಲಿ ಅಕ್ಕಿಹೆಬ್ಬಾಳು, ರಂಗಸಮುದ್ರ, ನರನಳ್ಳಿ, ಅರಕೆರೆ, ಸೋಸಲೆ, ಬನ್ನೂರು,[18] ಕನ್ನಂಬಾಡಿ, ಯಳಂದೂರು ಸತ್ಯಗಾಲ, ಬೇಲೂರು, ಗ್ರಾಮ, ಮಾವತ್ತೂರು, ಸರಗೂರು, ಉಮ್ಮತ್ತೂರು, ಹರದನಹಳ್ಳಿ,[19] ತಲಕಾಡು, ಕಳಲೆ, ಮಳಲವಾಡಿ, ಬಿಳಿಕೆರೆ, ಮೂಗೂರು, ಕಿಕ್ಕೇರಿ, ಹೊಸಹೊಳಲು, ಶ್ರೀರಂಗಪಟ್ಟಣ, ಕಾರಗಳ್ಳಿಗಳನ್ನು ಕ್ರಮವಾಗಿ ಜಯಿಸಿ ಅವರಲ್ಲಿ ಅಳಿದುಳಿದ ಕುದುರೆಗಳನ್ನು ತಮ್ಮ ವಶಮಾಡಿಕೊಂಡು ಸೈನ್ಯಕ್ಕೆ ಸೇರಿಸಿಕೊಂಡರು. ಇವರ ನಂತರ ಅಧಿಕಾರಕ್ಕೆ ಬಂದ ನಾಲ್ಕನೆಯ ಚಾಮರಾಜ ಒಡೆಯರು (ಕ್ರಿ.ಶ.1606–1617) ನಾಗಮಂಗಲದ ಪಾಳೆಯಗಾರನ ಮೇಲೆ ದಾಳಿಮಾಡಿ ಅವನಿಂದ ಕುದುರೆಗಳನ್ನು ಕಿತ್ತುಕೊಂಡು ತಮ್ಮ ಅಶ್ವದಳಕ್ಕೆ ಸೇರಿಸಿಕೊಂಡರು. ಕಂಠೀರವ ನರಸರಾಜ ಒಡೆಯರು ಕ್ರಿ.ಶ.1641–1648ರವರೆಗೆ ವಿವಿಧ ಪಾಳೆಯಗಾರರ ಮೇಲೆ ಅವರಿಂದ ದಾಳಿಗಳನ್ನು ಮಾಡಿ ಸೀಮೆಗಳನ್ನು ಮತ್ತು ಕುದುರೆಗಳನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡರು. ಬಿಜಾಪುರದ ರಣದುಲ್ಲಾಖಾನನು ಶ್ರೀರಂಗಪಟ್ಟಣದ ಮೇಲೆ ದಾಳಿಮಾಡಿದಾಗ ಅವರಲ್ಲಿ 40,000 ಕುದುರೆಗಳನ್ನು ಹೊಂದಿದ್ದ ಬೃಹತ್ ಅಶ್ವದಳವಿದ್ದಿತು.[20] ಇಷ್ಟು ಬೃಹತ್ ಮೊತ್ತದ ಅಶ್ವದಳವು ಖಡ್ಗ ಮತ್ತು ಭಲ್ಲೆಗಳನ್ನು ಹೊಂದಿದ ಪರಿಣಿತ ಸೈನಿಕರಿಂದ ಕೂಡಿದ್ದು ಪರಾಕ್ರಮದಿಂದ ಯುದ್ಧಮಾಡಿತು. ಯುದ್ಧದಲ್ಲಿ ಸೋತು ಓಡಿಹೋಗುತ್ತಿದ್ದ ಬಿಜಾಪುರ ಸೈನ್ಯವನ್ನು ಹಿಂಬಾಲಿಸಿ ದಾಳಿಮಾಡಿ ಮತ್ತೆ ಸೋಲಿಸಿದರು. ದೊಡ್ಡದೇವರಾಜ ಒಡೆಯರು(ಕ್ರಿ.ಶ.1659–1673) ಸಕರಾಯಪಟ್ಟಣ, ವಸ್ತಾರೆ, ಮಧುರೆ, ತಿರುಚನಾಪಳ್ಳಿ, ಘಟ್ಟದ ಮೊದಲಿಯಾರನಿಂದ ವಾಮಲೂರು ಮೊದಲಾದ ದೂರದ ಪ್ರದೇಶಗಳನ್ನು ಗೆಲ್ಲಲು ಅಶ್ವದಳವು ಕಾರಣವಾಯಿತು. ಅಲ್ಲದೆ ನರಸೀಪುರದ ಲಕ್ಷಣಪ್ಪ ನಾಯಕನನ್ನು ಸೋಲಿಸಿ ಅವನಿಂದಲೂ ಕುದುರೆಗಳನ್ನು ವಶಪಡಿಸಿಕೊಂಡು ಮೊಗದಿ ಮಾಡಿದರು.

ಚಿಕ್ಕದೇವರಾಜ ಒಡೆಯರ(ಕ್ರಿ.ಶ.1673–1704) ಕಾಲದಲ್ಲಿ ಬೆಂಗಳೂರಿನ ಮೇಲೆ ಮೊಘಲರು ದಾಳಿಮಾಡಿದರು. ಈ ಅನಿರೀಕ್ಷಿತ ದಾಳಿಯನ್ನು ಊಹಿಸದ ಚಿಕ್ಕದೇವರಾಜ ಒಡೆಯರು ರಾಜ್ಯರಕ್ಷಣೆಗೆ ಹೆಚ್ಚುವರಿ ಸೈನ್ಯದ ಅಗತ್ಯವನ್ನು ಮನಗಂಡ ಹೊಸದಾಗಿ 12,000 ಅಶ್ವದಳವನ್ನು ನೇಮಿಸಿಕೊಂಡರು. ಮರಾಠರು ಶ್ರೀರಂಗಪಟ್ಟಣದ ಮೇಲೆ ಆಕ್ರಮಣ ಮಾಡಿದಾಗ ರಾತ್ರಿವೇಳೆ ತಮ್ಮ ಸೈನ್ಯದಲ್ಲಿದ ಆವಿನದನಗಳ ಕೊಂಬಿಗೆ ಪಂಜುಗಳನ್ನು ಕಟ್ಟಿಸಿ ಅವುಗಳಿಂದ ಮರಾಠರ ಸೈನ್ಯದ ಮೇಲೆ ದಾಳಿಮಾಡಿಸಿದರು. ಮರಾಠರು ಮೈಸೂರು ಸೈನ್ಯದ ಈ ಅನಿರೀಕ್ಷಿತ ದಾಳಿಯಿಂದ ಕಂಗಾಲಾಗಿ ಯುದ್ಧ ಮಾಡಲಾರದೆ ಸೋತುಹೋದರು. ಯುದ್ಧದಲ್ಲಿ ಸೋತ ಮರಾಠರಿಂದ ಅಪಾರವಾದ ಅಶ್ವಗಳನ್ನು ಕಿತ್ತುಕೊಂಡು ಅವುಗಳನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಂಡರು. ಹೈದರನ ಚಿಕ್ಕಪ್ಪನಾದ ಗುಲಾಂ ಹೈದರಲಿ ಸಾಹೇಬನು ಶ್ರೀರಂಗಪಟ್ಟಣಕ್ಕೆ ಸೇರಿದ್ದ ಮಧುಗಿರಿಯಲ್ಲಿ ಮತ್ತು 50 ಕುದುರೆಗಳಿಗೆ ಗೊತ್ತುದಾರನಾಗಿದ್ದನು.[20] ದೇವನಹಳ್ಳಿಯ ಪಾಳೆಯಗಾರ ಮತ್ತು ದಳವಾಯಿಗಳ ನೇತೃತ್ವದಲ್ಲಿನ ಮೈಸೂರಿನ ಸೈನ್ಯದ ನಡುವೆ ನಡೆದ ದೇವನಹಳ್ಳಿ ಯುದ್ಧದಲ್ಲಿ ಹೈದರನು ಶೌರ್ಯ ಸಾಹಸಗಳಿಂದ ಹೋರಾಡಿ ಮೈಸೂರು ಸೈನ್ಯವು ಜಯಶಾಲಿಯಾಗಲು ಕಾರಣನಾದನು. ಈ ವಿಜಯದಲ್ಲಿ ಪ್ರಮುಖಪಾತ್ರ ವಹಿಸಿದ ಹೈದರನು ಮೈಸೂರಿನ ರಾಜಪ್ರತಿನಿಧಿಯಾದ ಕತ್ತಿಗೋಪಾಲರಾಜೆ ಅರಸರ ಕೃಪೆಗೆ ಪಾತ್ರನಾಗಿ 500 ಕಾಲಾಳುಗಳು ಮತ್ತು 200 ಕುದುರೆಗಳ ಮುಖಂಡನಾಗಿ ಕಾಲಕ್ರಮೇಣ ತನ್ನ ಶಕ್ತಿ ಸಾಮರ್ಥಗಳಿಂದ ಸೈನ್ಯದಲ್ಲಿ ಉನ್ನತ ಸ್ಥಾನವನ್ನು ಪಡೆದನು. ಹೈದರನು ಮರಾಠರ ಪ್ರಭಾವದಿಂದ ಅಶ್ವದಳದ ಮಹತ್ವವನ್ನು ಅರಿತುಕೊಂಡು ಪ್ರಾಮುಖ್ಯತೆ ಮತ್ತು ಹೆಚ್ಚಿನ ಪ್ರೋತ್ಸಾಹಗಳನ್ನು ನೀಡಿದನು. ಇದು ಅಶ್ವದಳದ ಬಳಕೆ ಮತ್ತು ಯುದ್ಧ ಸಮಯದಲ್ಲಿ ಸೈನ್ಯವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವೇಗದ ಸಾರಿಗೆಗೆ ದಾರಿಮಾಡಿಕೊಟ್ಟಿತು.

ಹೈದರ್ ಅಲಿಯು ಕ್ರಿ.ಶ.1758ರಲ್ಲಿ ಮೈಸೂರಿನ ದಳವಾಯಿಯಾಗಿ ನೇಮಕವಾದಾಗ 3000 ಅಶ್ವಗಳನ್ನು ಸೈನ್ಯದಲ್ಲಿ ಖಾಯಂ ಆಗಿ ಉಳಿಸಿಕೊಂಡು, 4,000 ಕುದುರೆಗಳನ್ನು ಸೇವೆಯಿಂದ ಬಿಡುಗಡೆಗೊಳಿಸಿದನು. ಹೀಗೆ ಸೇವೆಯಿಂದ ಬಿಡುಗಡೆ ಹೊಂದಿದ ಅಶ್ವದಳದ ಸೈನಿಕರನ್ನು ತನ್ನ ಸೈನ್ಯದಲ್ಲಿದ್ದ ಖಾಯಂ ಅಶ್ವದಳದಿಂದ ದಾಳಿಮಾಡಿಸಿದನು.[21] ಇದರಿಂದ ಮೈಸೂರಿನ ಸೈನಿಕರು ಶತ್ರುಗಳನ್ನಲ್ಲದೆ ತಮ್ಮ-ತಮ್ಮವರನ್ನೇ ಕೊಳ್ಳೆಹೊಡೆಯುತ್ತಿದ್ದರು. ಹೈದರ್ ಅಲಿಗಿಂತ ಮುಂಚೆ ದಳವಾಯಿಯಾಗಿದ್ದ ನಂಜರಾಜಯ್ಯನು ಸೈನಿಕ ಅಧಿಕಾರದಿಂದ ತೆರೆಮರೆಗೆ ಸರಿಯುತ್ತಿದ್ದಾಗ 1000 ಕುದುರೆಗಳನ್ನು ತಮ್ಮಲ್ಲಿ ನೌಕರಿಗೆ ಬಿಟ್ಟರೆ ರಾಜ್ಯಕ್ಕೆ

ಅಗತ್ಯವಾದ ವೇಳೆಯಲ್ಲಿ ಸೈನ್ಯವನ್ನು ತೆಗೆದುಕೊಂಡು ಬರುತ್ತೇನೆಂದು ಹೇಳಿ ತಾನು ಮೈಸೂರಿನಲ್ಲಿಯೇ ಉಳಿದುಕೊಂಡನು. ಮೈಸೂರು, ಬೆಟ್ಟದಪುರ, ಕೊಣನೂರು ಮುಂತಾದ ತನ್ನ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ಆ 1000 ಸೈನ್ಯವನ್ನು ವಿಭಾಗಿಸಿ ಕಾವಲಿಗೆ ನೇಮಿಸಿದರು. ಇದೇ ಸಂದರ್ಭದಲ್ಲಿ ಮರಾಠರ ಸರದಾರ ಮಿರ್ಜಿ ಗೋಪಾಲರಾಯನು 4,000 ಅಶ್ವದಳದೊಡನೆ ಬೆಂಗಳೂರಿಗೆ ಮುತ್ತಿಗೆ ಹಾಕಿದನು.[22] ಆದರೆ ನಂಜರಾಜಯ್ಯನ ಕಡೆಯಿದ್ದ 1000 ಅಶ್ವದಳವು ಈ ಯುದ್ಧದಲ್ಲಿ ಪಾಲ್ಗೊಳ್ಳಲಿಲ್ಲ. ಹೈದರನು ಮೈಸೂರು ಲಡಾಯಿಯಲ್ಲಿ ತನ್ನ ಸೈನ್ಯ ಕಡಿಮೆಯಾಯಿತೆಂದು ಅಶ್ವದಳವನ್ನು ಹೆಚ್ಚಿಸಿಕೊಳ್ಳಲು ಮೈಸೂರಿನ ಅರಸರಿಂದ ಅವಕಾಶವನ್ನು ಪಡೆದನು. ಕ್ರಿ.ಶ.1770ರಲ್ಲಿ ತ್ರಯಂಬಕಮಾಮನು 40,000 ಕುದುರೆ ಪೌಜು ಸಹಿತವಾಗಿ ಶ್ರೀರಂಗಪಟ್ಟಣ ಮತ್ತು ಆರ್ಕಾಟುಗಳನ್ನು ಗೆದ್ದುಕೊಳ್ಳಲು ಸಕರಾಯಪಟ್ಟಣ ಮೊದಲಾದ ಪ್ರದೇಶಗಳ ಮೇಲೆ ದಾಳಿ ಮಾಡಿದಾಗ ಬಾರ್ ಇಲಾಖೆಯ ಅಹಷಾಂ[23] ಅಶ್ವದಳದೊಂದಿಗೆ ಯುದ್ಧಕ್ಕೆ ಹೋಗಿ ಸೋತುಹೋದನು. ಆದರೆ ಟಿಪ್ಪು ಈ ಯುದ್ಧಕ್ಕೆ 4000 ಅಶ್ವದಳದಿಂದ ಶತ್ರುಗಳನ್ನು ಸೋಲಿಸಿದನು.[24] ಕಡಪಾದ ಮೇಲಿನ ದಾಳಿಯಿಂದ ಅಲ್ಲಿನ ಕುದುರೆಗಳನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಳ್ಳಲಾಯಿತು. ಆರ್ಕಾಟಿನ ದಾಳಿಗೆ ಶ್ರೀರಂಗಪಟ್ಟಣದಲ್ಲಿ ಕ್ರಿ.ಶ.1780ರಲ್ಲಿ 39,500 ಕುದುರೆ ಸವಾರರು, 13,000 ಬಾರಗೀರ ತಬೇಲೆಯವರು, 18,000 ಸವಾರ ಕಛೇರಿಯವರು 60,000 ಕಡಪಾ ಮೀರಲಿಖಾನನ ಸೈನಿಕರು, 2,000 ಸವಣೂರು ಹಕೀಂಖಾನನ ಮಕ್ಕಳ ಕಡೆಯ ಸುಮಾರು 500 ಅಲೇಮಾನಿ ಸವಾರರನ್ನು[25] ಹೊಂದಿದ ಮೈಸೂರು ಸಿಲಾದಾರರೆಂದೇ ಕರೆಯಲಾಗುತ್ತಿತ್ತು. ಸಿಲಾದಾರ ಎಂದರೆ ಕುದುರೆಗಳನ್ನು ಸ್ವಂತ ಖರ್ಚಿನಲ್ಲಿ ಸಾಕುವ ಮತ್ತು ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸಲು ಸರ್ಕಾರದ ವತಿಯಿಂದ ವೇತನವನ್ನು ಪಡೆಯುವಂತಹ ಸೈನಿಕರಾಗಿದ್ದರು. ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 12,000 ಸಿಲಾದಾರ ಪಡೆಯಿದ್ದಿತು. ಯುದ್ಧ ಮತ್ತು ಶಾಂತಿಯ ಕಾಲದಲ್ಲಿ ಕೆಲವರನ್ನು ಮಾತ್ರ ರಾಜ್ಯದ ಒಳಗಡಿಯ ಬಂದೋಬಸ್ತಿಗೋಸ್ಕರ ಅವಶ್ಯಕವಾದ ಸ್ಥಳಗಳಲ್ಲಿರಿಸಿ, ಮಿಕ್ಕ ಸೇನೆಯನ್ನು ಶ್ರೀರಂಗಪಟ್ಟಣದ ಸಮೀಪದಲ್ಲಿ ಠಾಣೆ ಮಾಡಿಸಲಾಗುತ್ತಿತ್ತು.[26] ಹೈದರನು ಈ ಅಶ್ವಪಡೆಯನ್ನು ಎರಡು ವಿಭಾಗಗಳಾಗಿ ವಿಂಗಡಿಸಿದ್ದನು. ಅವುಗಳೆಂದರೆ ಖಾಸತಬೇಲಿ ಮತ್ತು ಸಿಲಾದಾರರು. ಸಿಲಾದಾರರು ಮೊದಲೇ ಇದ್ದರು. ಆದರೆ ಖಾಸತಬೇಲಿಯನ್ನು ಹೊಸದಾಗಿ ನೇಮಿಸಿ 20,000 ಹೆಣ್ಣು ಕುದುರೆಗಳನ್ನು ಖಾಸಾತಬೇಲಿಗೆ ಹೊಸದಾಗಿ ಸೇರಿಸಲಾಯಿತು. ಈ ಖಾಸಾತಬೇಲಿಯಲ್ಲಿ ಒಟ್ಟಾರೆ 14,000 ಅಶ್ವಗಳಿದ್ದವು. ಸಿಲೇದಾರ ಗುಂಪಿನಲ್ಲಿ 28,000 ಅಶ್ವಗಳಿದ್ದವು. ಸಿಲೇದಾರರ ತಲಬು (ಪ್ರೋತ್ಸಾಹ ಧನ) ಮಾತ್ರ ಸರ್ಕಾರದಿಂದ ಪಾವತಿಯಾಗುತ್ತಿತ್ತು. ಆದರೆ ಆಯಾಯ ಸಿಲೇದಾರರು ತಮ್ಮದೆ ಆದ ಕುದುರೆಗನ್ನು ತಾವೇ ದಾಣಾಚಾರ (ಕುದುರೆಗಳನ್ನು ಸಾಕುವ ನೇರ ಹೊಣೆಗಾರಿಕೆ) ಖರ್ಚನ್ನು ವಹಿಸಿಕೊಳ್ಳುತ್ತಿದ್ದರು. ಸವಣೂರು ನವಾಬನು 2,000, ಚಿತ್ರದುರ್ಗ ಮತ್ತು ರಾಯದುರ್ಗಗಳ ಪಾಳೆಯಗಾರರು 7,000 ಕುದುರೆಗಳನ್ನು ಯಾವಾಗಲೂ ಯುದ್ಧಕ್ಕೆ ಸಿದ್ಧಮಾಡಿಕೊಳ್ಳಬೇಕಿತ್ತು. ಈ ಕಾಲದಲ್ಲಿ ಅಶ್ವದಳಕ್ಕೆ ಒಟ್ಟು 51,000 ಕುದುರೆಗನ್ನು ಸೇರಿಸಿಕೊಳ್ಳಲಾಯಿತು. ಒಂದೊಂದು ಸಾವಿರಕ್ಕೆ ಒಂದೊಂದು ರಿಸಾಲೆಯಂತೆ ವಿಭಾಗಗಳಿದ್ದವು.[27] ಈ ಸಿಲಾದಾರರು 4,000 ಅಶ್ವಗಳೊಂದಿಗೆ ಶ್ರೀರಂಗಪಟ್ಟಣದಲ್ಲಿದ್ದರೆ ಉಳಿದವರು ರಾಜಧಾನಿಯಿಂದ 50ಕಿ.ಮೀ. ದೂರದ ವ್ಯಾಪ್ತಿಯಲ್ಲಿ ನೇಮಕವಾಗಬೇಕಿತ್ತು.

ಟಿಪ್ಪೂ ಕಾಲದಲ್ಲಿ ಈ ಖಾಸ್ತಬೆಲಿಯ ಮೊತ್ತವು 7,000 ಆಗಿದ್ದರೆ, ಆತನ ಆಪ್ತ ಅಧಿಕಾರಿಯಾದ ಮೀರ್‌ಸಾಧಿಕ್ 1,500 ಸಿಲೆದಾರರನ್ನು ಹೊಂದಿದ್ದನು. ಟಿಪ್ಪುವಿನ ಕಾಲದಲ್ಲೂ ಇದು ಹೈದರನ ಕಾಲದ ಮಾದರಿಯಂತೆಯೇ ತನ್ನ ಕಾರ್ಯವನ್ನು ನಿರ್ವಹಿಸುತ್ತಿತ್ತು. ಶ್ರೀರಂಗಪಟ್ಟಣವು ಬ್ರಿಟಿಷರ ವಶವಾದಾಗ ಮೈಸೂರಿನ ಸೈನ್ಯದಲ್ಲಿ ಸು.12,500 ಕುದುರೆಗಳಿದ್ದವು. ಇದರಲ್ಲಿ 3,200 ಕುದುರೆಗಳನ್ನು ಬ್ರಿಟಿಷರು ತಮ್ಮ ಸ್ವಾಧೀನ ಪಡಿಸಿಕೊಂಡರು. ಟಿಪ್ಪುವಿನ ಸೇನಾ ನಾಯಕರಲ್ಲಿ 1,138 ಕುದುರೆಗಳು ಉಳಿದರೆ ಮಿಕ್ಕ 8,162 ಕುದುರೆಗಳು ಚದುರಿ ದೇಶಾಂತರ ಹೊರಟುಹೋದವು. ಕ್ರಿ.ಶ.1808ರಲ್ಲಿನ ಮೈಸೂರು ಮತ್ತು ಬ್ರಿಟಿಷರ ನಡುವಿನ ಒಪ್ಪಂದದ ನಿಯಮದ ಪ್ರಕಾರ 500 ಬಾರ್ಗಿರ್‌ನ(ಖಾಸ್ತಬೆಲಿ) ಕುದುರೆಯಲ್ಲಿ 3,500 ಸಿಲೆದಾರರು ಸೈನ್ಯದಲ್ಲಿ ಇರಬೇಕೆಂದು ತೀರ್ಮಾನವಾಯಿತು. ಪೂರ್ಣಯ್ಯನವರ ಕೊನೆಯ ಆಡಳಿತಾವಧಿಯಲ್ಲಿ 3,314 ಜನ ಸೇವಕರು, 3,190 ಕುದುರೆಗಳೂ ಇರುವಂತೆ ನೋಡಿಕೊಳ್ಳಲಾಯಿತು. ಇವುಗಳ ಖರ್ಚು ವಾರ್ಷಿಕವಾಗಿ 2,70,613 ಕಂಠೀರಾಯಿ ರೂಪಾಯಿಗಳಾಗಿದ್ದವು.[28] ಕ್ರಿ.ಶ.1868 ರವರೆಗೆ ಈಗಿನ ರಾಮನಗರವೆಂದು ಕರೆಯುವ ಅಂದಿನ ಕ್ಲೋಸ್‌ಪೇಟೆಗೆ ಅಶ್ವದಳದ ವರ್ಗಾವಣೆಯಾಯಿತು. ದಿವಾನ್ ಪೂರ್ಣಯ್ಯನವರು ಕ್ಲೋಸ್‌ಪೇಟೆಯ ಕುದುರೆ ಸಾಕಾಣಿಕೆ ಕೇಂದ್ರದ ನಿರ್ಮಾಣ ಮಾಡಿದ ಮೇಲೆ ಸಿಲಾದಾರರ ಮುಖ್ಯಸ್ಥನನ್ನೇ ಅಶ್ವದಳದ ಕುದುರೆ ರೆಜಿಮೆಂಟಿನ ಮುಖ್ಯಸ್ಥನನ್ನಾಗಿ ನೇಮಿಸಿದರು. ಅಲ್ಲದೆ ಪೂರ್ಣಯ್ಯನವರು ಸೈನ್ಯವನ್ನು ತೆಗೆದುಕೊಂಡು ಗುತ್ತಿಯನ್ನು ಮುತ್ತಲು ಹೊರಟ ಬ್ರಿಟಿಷರಿಗೆ ಈ ಕೇಂದ್ರದಿಂದ 1,600 ಕುದುರೆಗಳನ್ನು ಸರಬರಾಜು ಮಾಡಿ ಮದ್ರಾಸ್ ಗೌರ್ನರ್‌ನ ಮೆಚ್ಚುಗೆ ಗಳಿಸಿದರು. ರಾಮನಗರದಲ್ಲಿನ ಈ ಕುದುರೆ ಕೇಂದ್ರವು ಈಗ ಕುರುಪ್ ಲಾಯವೆಂಬ ಕೇರಿಯಾಗಿದೆ. ಆದರೆ ಕ್ಲೋಸ್‌ಪೇಟ್‌ಯ ಬಿಸಿಯಾದ ವಾತಾವರಣ ಮತ್ತು ಅಪೌಷ್ಟಿಕವಾದ ಆಹಾರದ ಕಾರಣದಿಂದ ಕ್ರಿ.ಶ.1875ರಲ್ಲಿ ಕುಣಿಗಲ್ಲಿನಲ್ಲಿ ಹೊಸದಾಗಿ ಕುದುರೆಗಳ ಸಾಕಾಣಿಕಾ ಕೇಂದ್ರವನ್ನು ನಿರ್ಮಿಸಿ, ಅಶ್ವಗಳನ್ನು ವರ್ಗಾಯಿಸಲಾಯಿತು. ಈ ಕುಣಿಗಲ್ಲು ಪ್ರದೇಶ ಅತ್ಯಂತ

ಸಮತಟ್ಟಾದ ಬಯಲು ಪ್ರದೇಶವಾಗಿದ್ದು ಇಲ್ಲಿ ಕುದುರೆಗಳು ಮತ್ತು ಇತರೆ ಪ್ರಾಣಿಗಳಿಗೆ ಬೇಕಾಗುವ ಮೇವಿನಲ್ಲಿ ಕ್ಯಾಲ್ಸಿಯಂ ಅಂಶವು ಹೇರಳವಾಗಿ ದೊರೆಯುತ್ತದೆ. ಜೊತೆಗೆ ಇಲ್ಲಿನ ಸಮಶೀತೋಷ್ಣ ವಾಯುಗುಣವು ಅತ್ಯಂತ ಆಹ್ಲಾದಕರವಾಗಿದ್ದು ಕುದುರೆಗಳ ದೈಹಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಈ ವೈಜ್ಞಾನಿಕ ಕಾರಣದಿಂದ ರಾಮನಗರದಲ್ಲಿದ್ದ ಕುದುರೆ ಸಾಕಣೆ ಕೇಂದ್ರವನ್ನು ಕುಣಿಗಲ್ಲಿಗೆ ವರ್ಗಾಯಿಸಲಾಯಿತು. ಅಲ್ಲದೆ ಅಂದಿನ ಮೈಸೂರಿನ ಸೈನ್ಯ ಮತ್ತು ಕುದುರೆ ರೇಸ್‌ಗಳಂತಹ ಕಾರಣದಿಂದ ಅವಶ್ಯಕವಾಗಿದ್ದ ಕ್ರೀಡೆಗಳಿಗೆ ಕುದುರೆಗಳನ್ನು ಈ ಕುದುರೆ ಸಾಕಣಿಕಾ ಕೇಂದ್ರದಿಂದಲೇ ಒದಗಿಸಲಾಗುತ್ತಿತ್ತು. 'ಕಿಂಬರ್ಲಿ' ಎಂಬ ಕುದುರೆಯು ಕ್ರಿ.ಶ.1897ರಲ್ಲಿ ಅಮೇರಿಕಾದಲ್ಲಿ ವಿಶ್ವಕಪ್ಪನ್ನು ಗೆದ್ದು ವಿಶ್ವವಿಖ್ಯಾತಿ ಪಡೆದಿತ್ತು. ಆದ್ದರಿಂದ ಈ ಪ್ರದೇಶದಲ್ಲಿನ ಕುದುರೆಗಳು ದೈಹಿಕವಾಗಿ ಅತ್ಯಂತ ಬಲಿಷ್ಠವಾಗಿರುವ ಕಾರಣದಿಂದ ಯೂರೋಪ್ ಮತ್ತು ಆಸ್ಟ್ರೇಲಿಯಾಗಳಿಗೆ ಇಂದಿಗೂ ಕೂಡ ರಫ್ತಾಗುತ್ತವೆ.

ಬ್ರಿಟಿಷರ ಕಾಲದಲ್ಲಿ ಭಾರತೀಯ ಸೈನ್ಯದ ಅಶ್ವದಳಕ್ಕೆ ಸೈನಿಕರು ನೇಮಕವಾಗಲು ದೈಹಿಕವಾಗಿ ಅತ್ಯಂತ ಬಲಿಷ್ಠವಾಗಿದ್ದು, ಕನಿಷ್ಠ 21 ಮತ್ತು ಗರಿಷ್ಠ 31 ವರ್ಷಗಳ ಅರ್ಹತೆಯನ್ನು ಹೊಂದಿರುವುದು[29] ಪ್ರಮುಖ ಅರ್ಹತೆಯಾಗಿತ್ತು. ಅಲ್ಲದೆ ಇವರು ಅಶ್ವದಳದಲ್ಲಿ ಕಾರ್ಯನಿರ್ವಹಿಸಬೇಕಾದ ಸಂದರ್ಭದಲ್ಲಿ ಕುದುರೆಗಳಿಗೆ ಹೊಡೆಯುವುದು, ಗಾಯಗೊಳಿಸುವುಂತಹ ಯಾವುದೇ ದೈಹಿಕ ಹಿಂಸೆಗಳನ್ನು ನೀಡುವಂತಿಲ್ಲ. ಒಂದುವೇಳೆ ಹಾಗೇನಾದರೂ ಮಾಡಿದರೆ ಆ ಸೈನಿಕನಿಗೆ ಕಾರಾಗೃಹವಾಸ, ದಂಡವಸೂಲಾತಿ, ವೇತನ ತಡೆಹಿಡಿಯುವಿಕೆ, ರಜಾನೀಡದಿರುವುದು, ಸೇವೆಗಳಲ್ಲಿ ಹಿಂಬಡ್ತಿ[30] ಮೊದಲಾದ ಸೈನಿಕ ಶಿಸ್ತುಕ್ರಮಗಳಿಗೆ ಒಳಪಡಬೇಕಾಗಿತ್ತು.

### ಗಜದಳ

ಕ್ರಿ.ಶ.1399–1553ರಲ್ಲಿ ಅಧಿಕಾರಕ್ಕೆ ಬಂದ ತಿಮ್ಮರಾಜ ಒಡೆಯರ ಆಳ್ವಿಕೆಯವರೆಗೆ ಮೈಸೂರಿನ ಸೈನ್ಯದಲ್ಲಿ ಗಜದಳದ ಉಲ್ಲೇಖಗಳು ದೊರೆಯುವುದಿಲ್ಲ. ತಿಮ್ಮರಾಜ ಒಡೆಯರು ಅಧಿಕಾರಕ್ಕೆ ಬಂದಾಗ ನಂಜನಗೂಡಿನ ರಥೋತ್ಸವದ ಸಂದರ್ಭದಲ್ಲಿ ಕೆಲವು ಪಾಳೆಯಗಾರರು 'ಬಿರುದಂತೆಂಬರ ಗಂಡ' ಎಂಬ ಬಿರುದಿನಿಂದ ತಮ್ಮನ್ನು ಕರೆಸಿಕೊಳ್ಳುತ್ತಿದ್ದರು. ಇದನ್ನು ತಿಳಿದ ಮೈಸೂರಿನ ಸೆಟ್ಟಿಯೊಬ್ಬನು ಈ ಬಿರುದು ನಮ್ಮ ಮೈಸೂರು ಮಹಾರಾಜನಿಗಲ್ಲದೆ ಬೇರಾರಿಗೂ ಸಲ್ಲತಕ್ಕದ್ದಲ್ಲ ಎಂದಾಗ ಆ ಪಾಳೆಯಗಾರರು ಅದನ್ನು ವಿರೋಧಿಸಿ ಆತನನ್ನು ಬಂಧಿಸಿದರು. ಈ ಸುದ್ಧಿಯನ್ನು ತಿಳಿದ ತಿಮ್ಮರಾಜ ಒಡೆಯರು ಪಾಳೆಯಗಾರರನ್ನು ಸೋಲಿಸಿ ಆನೆ[31] ಮತ್ತು ಅಂದಳವನ್ನು ವಶಮಾಡಿಕೊಂಡರು. ಇದು ಮೈಸೂರು ಒಡೆಯರ ಸೈನ್ಯದಲ್ಲಿ ಮೊದಲನೆಯ ಆನೆಯ ಉಲ್ಲೇಖವಾಗಿದೆ.

ಕ್ರಿ.ಶ.1578ರಲ್ಲಿ ಸಿಂಹಾಸನವೇರಿದ ರಾಜಒಡೆಯರ್ ತಮ್ಮ ರಾಜ್ಯ ವಿಸ್ತರಣೆಗೆ ಮುಂದಾದರು. ಮೈಸೂರಿನ ವಿರುದ್ಧವಾಗಿ ಬೇಲೂರಿನ ಕೃಷ್ಣಪ್ಪನಾಯಕ ಗ್ರಾಮದ ವೀರರಾಜಯ್ಯ, ಮೂಗೂರು, ಬಾಳಾಲೋಚನ ನಾಯಕ, ಎಳಂದೂರಿನ ಇಮ್ಮಡಿ ರಾಜರಾಜನಾಯಕ, ಉಮ್ಮತ್ತೂರಿನ ಮಲ್ಲರಾಜಯ್ಯ ಹಾಗೂ ಕುಣಿಗಲು ಮುಂತಾದ ಪ್ರದೇಶಗಳ ಪಾಳೆಯಗಾರರು ಒಕ್ಕೂಟವನ್ನು ರಚಿಸಿಕೊಂಡರು. ಈ ಒಕ್ಕೂಟ ಸೈನ್ಯವು ಶ್ರೀರಂಗಪಟ್ಟಣವನ್ನು ಸಾಧಿಸಲು ಕುಣಿಗಲು ಬಳಿ ಬೀಡುಬಿಟ್ಟಿದ್ದ ವಿಷಯವನ್ನು ತಿಳಿದ ರಾಜಒಡೆಯರು ಕುಣಿಗಲಿನ ಬಳಿ ಪಾಳೆಯಗಾರರ ಒಕ್ಕೂಟ ಸೈನ್ಯವನ್ನು ಸೋಲಿಸಿ ಅವರಿಂದ ಆನೆ, ಕುದುರೆಗಳನ್ನು[32] ವಶಮಾಡಿಕೊಂಡರು.

ಕ್ರಿ.ಶ.1610ರಲ್ಲಿ ಮೈಸೂರಿನಲ್ಲಿ ಮಹಾನವಮಿ ಉತ್ಸವವನ್ನು ಮೊದಲ ಬಾರಿಗೆ ಆಚರಿಸಲಾಯಿತು. ಈ ಉತ್ಸವ ಆಚರಣೆಯಲ್ಲಿ ರಾಜಒಡೆಯರು ಪಟ್ಟದ ಆನೆಯನ್ನು ಪೂಜಿಸಿದರು. ಅರಮನೆಯ ಮುಂಭಾಗದ ಕೆಮ್ಮಣ್ಣು ಮಟ್ಟಿಯ ಸುತ್ತಲೂ ಸಾಲಾಗಿ ನಿಂತಿರುವ ಆನೆ, ಕುದುರೆ, ಒಂಟೆಗಳಲ್ಲದೆ; ಹನುಮದ್ವಜ, ಗರುಡಧ್ವಜ, ಮಕರಟೆಕ್ಕೆಗಳೆಂಬ ಬಿರುದುಗಳೊಂದಿಗೆ ಸೈನಿಕ ಕವಾಯತನ್ನು ವೀಕ್ಷಿಸಿದರು.

ಚಾಮರಾಜ ಒಡೆಯರ್ ಕ್ರಿ.ಶ.1616ರಲ್ಲಿ ಮೈಸೂರಿನ ಸಿಂಹಾಸನವೇರಿದ ಕೂಡಲೆ ಕಟ್ಟೆಮಳಲವಾಡಿಯ ಚನ್ನರಾಜಯ್ಯನನ್ನು ಯುದ್ಧದಲ್ಲಿ ಸೋಲಿಸಿ ಆತನೊಂದಿಗೆ ಮೈಸೂರಿನ ಸೈನ್ಯಕ್ಕೆ ಆನೆಗಳನ್ನು ಒದಗಿಸಲು ಒಂದು ಒಪ್ಪಂದವನ್ನು ಮಾಡಿಕೊಂಡರು. ಈ ಒಪ್ಪಂದದ ಪ್ರಕಾರ ಅಗತ್ಯವಾದ ಆನೆಗಳನ್ನು ಮೈಸೂರಿನ ಸೈನ್ಯಕ್ಕೆ ಒದಗಿಸಲು ಕಾರ್ಕೋಡಿಹಳ್ಳದ ಘಟ್ಟದ ಕೆಳಗಿರುವ ವರ್ತಕ ಬಾಳರಾಯನಿಗೆ ಕಟ್ಟೆಮಳಲವಾಡಿ ಸೀಮೆಯ ತಮ್ಮಡಹಳ್ಳಿ ಗ್ರಾಮದಲ್ಲಿ ವಾರ್ಷಿಕವಾಗಿ 791 ವರಹಗಳ ನೆಲತೆರವನ್ನು ಹಾಗೂ 80 ವರಹಗಳ ಕೈಸಂಬಳವನ್ನು, ಅವನ ಮುಖಾಮಿಗೆ 12 ವರಹದ ಭೂಮಿಯನ್ನು ಕೊಡುವುದಲ್ಲದೆ ಅವನು ಹೇಳಿದ ಸ್ಥಳದಲ್ಲಿ 300 ಆನೆ ಕಪ್ಪುಗಳನ್ನು ತೆಗೆಸಿಕೊಟ್ಟರೆ; ಅವನು ಸೈನ್ಯಕ್ಕೆ ಬೇಕಾದ ಆನೆಗಳನ್ನು ಸುಲಭವಾದ ಕ್ರಯಕ್ಕೆ ತಂದುಕೊಡುವುದು. ಅಲ್ಲದೆ

ಬಾಳರಾಯನಿಗೆ ಆಳುಗಳ ಸಂಬಳ ಮುಂತಾದವನ್ನು ನಿನ್ನ ಕೈಯಿಂದಲೇ ಕೊಟ್ಟು, ಕಪ್ಪಿಗೆ ಬಿದ್ದ ಆನೆಗಳನ್ನು ಪಳಗಿಸಿ ಶ್ರೀರಂಗಪಟ್ಟಣಕ್ಕೆ ತಂದುಕೊಡುವುದು. ಅಲ್ಲದೆ ಮಾರ್ಗಮಧ್ಯದಲ್ಲಿ ಆನೆಗಳು ತಪ್ಪಿಸಿಕೊಂಡರೆ ಹಣ ನೀಡತಕ್ಕುದಲ್ಲ[33] ಎಂದು ತೀರ್ಮಾನವಾಯಿತು. ಈ ಒಪ್ಪಂದದ ಪ್ರಕಾರ ಆನೆಗಳ ಕ್ರಯವು ಈ ಕೆಳಗಿನಂತಿದೆ.

| ಆನೆಗಳು | ಪ್ರಮಾಣ | ವರಹಗಳು | |
|---|---|---|---|
| ಒಂದುಮೊಳದ ಕೊಂಬಿನ ಗಂಡಾನೆ | 1 | 100 ವರಹಗಳು | |
| ಗೇಣುಕೊಂಬಿನ ಗಂಡಾನೆ | 1 | 40 ವರಹಗಳು | |
| ಚೋಟುಕೊಂಬಿನ ಆನೆ | 1 | 30 ವರಹಗಳು | |
| ಮುಗುಳು ಕೊಂಬಿನ ಹೆಣ್ಣಾನೆ | 1 | 25 ವರಹಗಳು | |
| ಐದು ಮೊಳದ ಹೆಣ್ಣಾನೆ | 1 | 50 ವರಹಗಳು | |
| ನಾಲ್ಕುಮೊಳದ ಹೆಣ್ಣಾನೆ | 1 | 40 ವರಹಗಳು | |
| ಮೂರು ಮೊಳದ ಹೆಣ್ಣಾನೆ | 1 | 30 ವರಹಗಳು | |
| ಆನೆ ಮರಿ | 1 | 15 ವರಹಗಳು | |

ಈ ರೀತಿಯಾಗಿ ಅವರು ತಮ್ಮ ಆನೆ ಕ್ರಯವನ್ನು ನಿಗದಿಮಾಡಿದರು. ಈ ಒಪ್ಪಂದದಿಂದ ಮೈಸೂರು ಸೈನ್ಯದಲ್ಲಿ ಗಜದಳದ ಅಭಿವೃದ್ಧಿಗೆ ಪೂರಕವಾಗಿದ್ದಲ್ಲದೆ ಸೈನ್ಯಕ್ಕೆ ಅವಶ್ಯಕವಾಗಿದ್ದ ಆನೆಗಳನ್ನು ಸ್ಥಳೀಯ ಕಾಡುಗಳಲ್ಲಿ ಹಿಡಿದುತರಲು ಅನುಕೂಲಕರವಾಯಿತು. ಏಕೆಂದರೆ ಅವರಿಗೆ ಸ್ಥಳಿಯವಾಗಿ ದೊರೆಯುತ್ತಿದ್ದ ಆನೆಗಳು ಮೈಸೂರಿನ ಸೈನ್ಯದಲ್ಲಿ ಆರ್ಥಿಕ ಸಂಪತ್ತನ್ನು ಉಳಿಸಲು ಸಹಕಾರಿಯಿತು. ಆನೆಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸುವಂತಹ ಒಪ್ಪಂದವಾಗಿದೆ.

ಗೋವಿಂದ ವೈದ್ಯನು ರಚಿಸಿರುವ 'ಕಂಠೀರವ ನರಸರಾಜ ವಿಜಯಂ' ಕೃತಿಯು ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಮೈಸೂರಿನ ಮೇಲಾದ ಆಕ್ರಮಣಗಳಲ್ಲಿ ಸೈನ್ಯದಲ್ಲಿದ್ದ ಆನೆಗಳ ಸಂಖ್ಯೆಗಳನ್ನು ಕುರಿತು ವರ್ಣಿಸಿರುವ ರೀತಿಯು ಗಮನಾರ್ಹವಾಗಿದೆ. ಈ ಪ್ರಕಾರ ಗಜದಳದ ಮಾಹಿತಿಯು ಕೆಳಕಂಡಂತಿದೆ.

ಹತ್ತು ಸಾವಿರ ಕಾಲಾಳು ಗಜಗಳ್ಳೈ

ವತ್ತು ತುರಗ ಸಾವಿರದ

ಮೊತ್ತದ ಪದಿನಾಹ ರಾಮರಾಜೇಂದ್ರ

ಸಂಪತ್ತಿನೊಳ್ಳೆ ತಂದನಾಗ[34] ಎಂದಿದ್ದಾನೆ.

ಹದಿನಾಡಿನ ಪಾಳೆಯಗಾರನಾದ ರಾಮರಾಜಯ್ಯನು ಹತ್ತು ಸಾವಿರ ಕಾಲಾಳು, ಐವತ್ತು ಆನೆಗಳನ್ನು ಒದಗಿಸಿದನು.

ಬಳಿಕಲಿಪತ್ತು ಸಾವಿರ ಪಾಯ್ದಳ ಮದ

ವೆಳೆಸಿದ ಕರಿಗಳೈವತ್ತು

ಸಲೆ ಕುದುರೆಗಳ ಮೇಳದೆ ರುದ್ರಗಣ ಭೂಪ

ಪಳುವದೆ ಬಂದನೇನೆಂಬೆ[35]

ಇಪ್ಪತ್ತುಸಾವಿರ ಕಾಲ್ದಳದ ಜೊತೆಗೆ ಐವತ್ತು ಮದಗಜಗಳನ್ನು ರುದ್ರಗಣದ ಅರಸನು ಒದಗಿಸಿದರೆ. ತಲಕಾಡಿನ ನಂಜೇಂದ್ರನು ಮುವ್ವತ್ತು ಗಜಗಳನ್ನು[36] ಒದಗಿಸಿದನು. ಶ್ರೀರಂಗಪಟ್ಟಣದ ಮೇಲಿನ ಬಿಜಾಪುರದ ಈ ದಾಳಿಯಲ್ಲಿನ ಯುದ್ಧರಂಗದಲ್ಲಿದ್ದ ಸೈನ್ಯಕ್ಕೆ ಮಾಡಿದ ಬಿಡಾರವನ್ನು ಕುರಿತು ಈ ರೀತಿಯಾಗಿ ವರ್ಣಿಸಲಾಗಿದೆ.

ಆನೆಯಶಾಲೆ ಹಯಾವಳಿಗೆಳ ಲಾಯ

ಜೀನಶಾಲೆಗಳಲ್ಲಿ

ಏನೆಂಬೆ ನೂತನ ವಡೆವುದಿರೆ ನೋಳ್ಪ

ಮಾನಿಸರುಗಳ ಕಣ್ಮನಕೆ[37] ಎಂದಿದ್ದಾನೆ

ಆನೆ ಮತ್ತು ಕುದುರೆಗಳ ಲಾಯಗಳು, ಜೀನಶಾಲೆಗಳು ಯುದ್ಧರಂಗದಲ್ಲಿ ಕಂಗೊಳಿಸುತ್ತಿದ್ದವು. ವಿವಿಧ ಪಾಳೆಯಗಾರರು, ಬಿಜಾಪುರದ ಸುಲ್ತಾನರ ವಿರುದ್ಧದ ಯುದ್ಧದಲ್ಲಿ ಮೈಸೂರಿಗೆ ಆನೆಗಳನ್ನು ಒದಗಿಸಿದ್ದರಿಂದ ಅಪಾರ ಪ್ರಮಾಣದಲ್ಲಿ ಸೈನ್ಯದ ಬಿಡಾರಗಳು ನಿರ್ಮಾಣವಾದವು. ಯುದ್ಧ ಭೂಮಿಯಲ್ಲಿ ಆನೆಗಳ ಮೇಲೆ ಕುಳಿತು ಭಾರಿಸುತ್ತಿದ್ದ ಢಮಾಮಿಗಳ ಅಬ್ಬರವು[38] ಗಗನಕ್ಕೆ ಮುಟ್ಟುತ್ತಿತ್ತು. ಆನೆಗಳಿಗೆ ಕೊಂಬುಗತ್ತಿ, ಖಡ್ಗ ಮೊದಲಾದ ಆಯುಧಗಳನ್ನು ಕಟ್ಟಲಾಗುತ್ತಿತ್ತು. ಆನೆಗಳಿಗೆ ಯುದ್ಧ ಕವಚವನ್ನು ತೊಡಿಸಿದ್ದರಿಂದ ಆಯುಧಯುಕ್ತವಾಗಿ ಓಡಾಡುತ್ತಿದ್ದ ಆನೆಗಳ ಹಿಂಡು ಕೈಕಾಲುಗಳನ್ನು ಪಡೆದ ಪರ್ವತಗಳಂತೆ ಎಂಟು ದಿಕ್ಕುಗಳಿಗೂ ಮುತ್ತುತ್ತಿದ್ದವು.[39] ಈ ಸಂದರ್ಭದಲ್ಲಿ ಕುದುರೆಗೆ ಕುದುರೆ, ಕಾಲಾಳುಗಳಿಗೆ ಕಾಲಾಳು, ಮದಗಜಗಳಿಗೆ ಮದಗಜಗಳು ಎದುರಾಗಿ ಹೋರಾಡುತ್ತಿದ್ದವು. ಕೆಳದಿಯ ಸದಾಶಿವರಾಯನು ಕಲಬುರ್ಗಿಯ ಮೇಲೆ ದಾಳಿಮಾಡಿದಾಗ ಲೆಕ್ಕವಿಲ್ಲದಷ್ಟು ಆನೆ, ಕುದುರೆ ಮತ್ತು ಕಾಲಾಳುಪಡೆಯಿತ್ತು. ಈ ಯುದ್ಧದಲ್ಲಿ ಬಿಜಾಪುರದ ಸುಲ್ತಾನನು ಏರಿದ್ದ ಮದ್ದಾನೆಯ ಅಂಗಾಂಗಳಲ್ಲಿ ಸಿಕ್ಕಿದ್ದ ಸರಪಳಿ, ಪೊರಜೆ, ಜೊತ್ತಗಳನ್ನು ಹೊಡೆದು ಕತ್ತರಿಸಿ ಜೂಲುಗಳನ್ನು ಸಡಿಲಿಸಿ ಪ್ರಾಕರವನ್ನು ಬೀಳಿಸಿದನು. ಆದರೆ ಸುಲ್ತಾನನು ಸಾಧನ ಚಮತ್ಕಾರಗಳಿಂದ ಹತ್ತಿರದಲ್ಲಿದ್ದ ಮತ್ತೊಂದು ಆನೆಯ ಬೆನ್ನೇರಿ ಹರಿದು ಹಂಚಿಹೋಗಿದ್ದ ಸೈನ್ಯವನ್ನು ಒಗ್ಗೂಡಿಸಿದನು.[40] ಈ ಯುದ್ಧದ ನಂತರ ರಣರಂಗದ ಚಿತ್ರಣವು ಅಪಾರವಾದ ಆನೆ, ಕುದುರೆ, ಸೈನಿಕರು ಹೆಣವಾಗಿ ಚೆಲ್ಲಾಪಿಲ್ಲಿಯಾಗಿ ಯಮಲೋಕದ ಹಾಗೆ ನರಕಬಂಧ ಮಯವಾಗಿ ಕಾಣುತ್ತಿತ್ತು.

ಶ್ರೀರಂಗಪಟ್ಟಣದಲ್ಲಿ ದೊರಕಿದ ಕೆಳದಿಯ ಚೆನ್ನಮ್ಮನ ಕಾಲದ ಸಂಸ್ಕೃತ ಶಾಸನವೊಂದರಲ್ಲಿ ಕೆಳದಿಯ ಅರಸರು ಮೈಸೂರು ಸೈನ್ಯದಲ್ಲಿ ಗಂಗಾಧರನೆಂಬ ಆನೆಯನ್ನು ಸಂಹರಿಸಿರುವರೆಂದು ತಿಳಿದುಬರುತ್ತದೆ.[41] ಹೈದರನ ಕಾಲದಲ್ಲಿ ಹೌದಾ ಸಮೇತವಾದ ಆನೆಗೆ ರುಸುಮು ಏರ್ಪಟ್ಟು ವರ್ಷವೊಂದಕ್ಕೆ ಹತ್ತು ತಿಂಗಳುಗಳ ಪ್ರೋತ್ಸಾಹ ಧನ ನಿಗಧಿಯಾಯಿತು. ಈ ಪೈಕಿ ಮೂರರಲ್ಲಿ ಎರಡುಭಾಗ ನಗದಾಗಿಯೂ, ಮಾಹೆಯಾನ ಬಟವಾಡೆಯಾಗುತ್ತ ಉಳಿದ ಒಂದು ಭಾಗವು ಯುದ್ಧರಂಗದಲ್ಲಿ ಕೈವಶವಾದ ವಿವಿಧ ರೀತಿಯ ಬಟ್ಟೆಗಳ ರೂಪದಿಂದ ಎರಡು ಅಥವಾ ಮೂರು ವರ್ಷಗಳಿಗೆ ಒಂದುಸಲ ಸಂದಾಯವಾಗುತ್ತಿತ್ತು.[42] ಚಿಕ್ಕದೇವರಾಜ ಒಡೆಯರು ಆನೆಗಳಿಗಾಗಿಯೇ 10 ಲಾಯಗಳನ್ನು ನಿರ್ಮಾಣ ಮಾಡಿದರು.

ಮೈಸೂರು ಒಡೆಯರು ತಮ್ಮ ಕಾಲದಲ್ಲಿ ನಿರ್ಮಿಸಿದ ಕೋಟೆಗಳಲ್ಲಿ ಆನೆಬಾಗಿಲು ಎಂಬ ಮುಖ್ಯ ಪ್ರವೇಶ ದ್ವಾರಗಳು ಕಂಡುಬರುತ್ತವೆ. ಅದರಲ್ಲಿ ಮೈಸೂರು ಅರಮನೆಯ ಮುಖ್ಯದ್ವಾರ ಮತ್ತು ಶ್ರೀರಂಗಪಟ್ಟಣದ ಪಶ್ಚಿಮದಲ್ಲಿರುವ ದಿಲ್ಲಿ ಬಾಗಿಲಿನ ಪಕ್ಕ ಆನೆಬಾಗಿಲು ಎಂಬ ಪ್ರವೇಶ ದ್ವಾರವಿದೆ. ಈ ಪ್ರವೇಶ ದ್ವಾರವು ದಸರಾ ಸಂದರ್ಭದಲ್ಲಿ ಕಾವೇರಿ ನದಿಯಲ್ಲಿ ಪೂಜೆಗಾಗಿ ಅಥವಾ ಯುದ್ಧದಲ್ಲಿ ಮಡಿದ ಆನೆಯೊಂದರ ನೆನಪಿಗಾಗಿ ನಿರ್ಮಿಸಿದಂತಿದೆ. ಶ್ರೀರಂಗಪಟ್ಟಣದ ದರಿಯಾದೌಲತ್ ಮತ್ತು ಮೈಸೂರಿನ ಅರಮನೆಯ ಗೋಡೆಗಳ ಮೇಲೆ ಕಂಡುಬರುವ ಚಿತ್ರಗಳಲ್ಲಿಯೂ ಕೂಡ ಮೈಸೂರು ಅರಸರ ಕಾಲದಲ್ಲಿನ ಗಜದಳವನ್ನು ಕುರಿತು ಅಧ್ಯಯನ ಮಾಡಲು ಸಹಾಯಕವಾಗಿವೆ. ಶ್ರೀರಂಗಪಟ್ಟಣದ ಪಶ್ಚಿಮ ದಿಕ್ಕಿನ ಗೋಡೆಯ ಮೇಲೆ ಒಂದನೆಯ ಪಟ್ಟಿಯಲ್ಲಿ ಕ್ರಿ.ಶ.1780ರಲ್ಲಿ ನಡೆದ ಪೊಲಿಲೂರು ಕದನದ ದೃಶ್ಯಗಳನ್ನು ಚಿತ್ರಿಸಲಾಗಿದೆ. ಹೈದರನು ಗಜದಳದ ಮಧ್ಯದಲ್ಲಿರುವ ಆನೆಯ ಮೇಲೆ ಆಸೀನನಾಗಿದ್ದು ಈ ಆನೆಯನ್ನು ಯುದ್ಧಕವಚ ಮತ್ತು ಹೌದಾಗಳಿಂದ ಅಲಂಕರಿಸಲಾಗಿದೆ. ಅವನ ಹಿಂದೆ ಆನೆಗಳ ಸಾಲು, ಪದಾತಿದಳ ಮತ್ತು ಯುದ್ಧೋಪಕರಣಗಳು ಕಂಡುಬರುತ್ತವೆ. ಮೈಸೂರಿನ ಜಗನ್ಮೋಹನ ಅರಮನೆಯ ಕಲ್ಯಾಣ ಮಂಟಪದ ಗೋಡೆಗಳ ಮೇಲಿರುವ ಅಂಕಣಗಳಲ್ಲಿ ದಸರಾ ಉತ್ಸವದಲ್ಲಿ ಭಾಗವಹಿಸಿರುವ ಪಟ್ಟದಾನೆಗಳು ಅವುಗಳ ಹಿಂಭಾಗದಲ್ಲಿ ಕುಮ್ಕಿ(ಪರಿವಾರ) ಆನೆಗಳನ್ನು ಕೂಡ ಚಿತ್ರಿಸಲಾಗಿದೆ. ಈ ಕುಮ್ಕಿ ಆನೆಗಳು ಅರಮನೆಯ ಉನ್ನತಾಧಿಕಾರಿಗಳನ್ನು ಕೂರಿಸಿಕೊಂಡು

ಮೆರವಣಿಗೆಯಲ್ಲಿ ಸಾಗುತ್ತಿವೆ. ಅರಮನೆಯ ಮುಂಭಾಗದಲ್ಲಿರುವ ಕುಶಾಲತೋಪುಗಳು ಹಾರುತ್ತಿದ್ದಂತೆಯೇ ಅಂಬಾರಿಯನ್ನು ಹೊತ್ತ ಆನೆಗಳು ಮೆರವಣಿಗೆಯಲ್ಲಿ ಸಾಗುತ್ತಿದ್ದವು. ಈ ಮೆರವಣಿಗೆಯಲ್ಲಿ ನಿಶಾನಿ ಆನೆಗಳು, ಒಂಟಿ ಆನೆಗಳು ಅರಸರ ಆಪ್ತರು ಮತ್ತು ಆಸ್ಥಾನದ ಪ್ರಮುಖರನ್ನು ಹೊತ್ತುಸಾಗುತ್ತಿದ್ದವು. ಮೆರವಣಿಗೆಯ ಬಹುಭಾಗವೆಲ್ಲ ಹೋದ ಮೇಲೆ ಮಹಾರಾಜರ ಅಂಗರಕ್ಷಕರು, ನಾದಸ್ವರದವರು ಬರುತ್ತಿದ್ದರು. ಅವರ ಹಿಂದೆ ಅಂಬಾರಿಯಲ್ಲಿ ಕುಳಿತ ಅರಸರಿರುತ್ತಿದ್ದರು. ಬನ್ನಿ ಪೂಜೆನಡೆದ ನಂತರ ಪಂಜಿನ ಮೆರವಣಿಗೆ ನಡೆಯುತ್ತಿತ್ತು. ಇದನ್ನು ವೀಕ್ಷಿಸಿದ ನಂತರ ಅರಸರು ಅಂಬಾರಿಯನ್ನೇರಿ ಪರಿವಾರ ಸಮೇತ ಅರಮನೆಗೆ ವಾಪಸ್ಸಾಗುತ್ತಿದ್ದರು.

**ಗೋಲಂದಾಜು ಅಥವಾ ಫಿರಂಗಿದಳ**

ಮಧ್ಯಯುಗೀನ ಭಾರತದ ಇತಿಹಾಸದಲ್ಲಿನ ಸೈನ್ಯದಲ್ಲಿ ಪ್ರಮುಖವಾದ ಮತ್ತೊಂದು ಪ್ರಧಾನವಾದ ಅಂಗಪಡೆಯಾಗಿತ್ತು. ಸಿಡಿಮದ್ದನ್ನು ಒಳಗೊಂಡ ಎಲ್ಲಾ ಶಸ್ತ್ರಾಸ್ತ್ರಗಳನ್ನು ಒಳಗೊಂಡಿದೆ. ಇದರಲ್ಲಿ ಬಂದೂಕು, ತೋಪು ಅಥವಾ ಫಿರಂಗಿ, ಮತ್ತಿತರ ಸಿಡಿಮದ್ದಿನ ಉಪಕರಣಗಳೂ ಸೇರಿವೆ.[43] ಸಾಮಾನ್ಯವಾಗಿ ಸಿಡಿಮದ್ದನ್ನು ತಯಾರಿಸಲು ಗಂಧಕ, ಇದ್ದಿಲು ಮತ್ತು ಪೆಟ್ಲುಪ್ಪುಗಳನ್ನು 11.9:13.5:24.6ರ ಪ್ರಮಾಣದಲ್ಲಿ ಸಂಯೋಜಿಸಿ ತಯಾರಿಸಲಾಗುತ್ತಿತ್ತು.[44] ಈ ಪದ್ಧತಿಯನ್ನು ಚೀನಾ, ಭಾರತ, ಗ್ರೀಸ್, ಅರೇಬಿಯಾ, ಮಂಗೋಲ್, ಬ್ರಿಟನ್ ಮತ್ತು ಜರ್ಮನಿಯ ಜನರು ಅನುಸರಿಸಿದ್ದರು. ಹೆಚ್.ಜಿ.ವೇಲ್ಸ್ ಹೇಳುವಂತೆ ಮಂಗೋಲರ ದಿಗ್ವಿಜಯಗಳಿಗೆ ಅವರು ಬಳಸಿದ ಬಂದೂಕು ಮತ್ತು ಸಿಡಿಮದ್ದುಗಳೇ ಕಾರಣವಾಗಿದೆ.[45] 15ನೆಯ ಶತಮಾನದಲ್ಲಿನ ಕಾವ್ಯಗಳು ಫಿರಂಗಿ, ಗುಂಡುಗೋವಿ, ಮದ್ದಿನ ಪೊಟ್ಟಣ, ಶತಘ್ನಿ, ಉಪ್ಪಿನತಿತ್ತಿ, ಪೆಟಲು, ಕೈಗೋವಿ, ಭೂರಿಶತಗ್ನಿ, ತೋಪು ಇನ್ನೂ ಮುಂತಾದವುಗಳ ಬಳಕೆಯನ್ನು ಸ್ಪಷ್ಟಪಡಿಸಿವೆ.[46] ಕ್ರಿ.ಶ.16–17ನೆಯ ಶತಮಾನದಲ್ಲಿ ಸಿಡಿಮದ್ದನ್ನು ಬಳಸಿ ಗುಂಡುಗಳನ್ನು ಸಿಡಿಸುತ್ತಿದ್ದ ಫಿರಂಗಿಗಳ ಬಳಕೆ ಯಥೇಚ್ಚವಾದದ್ದು ಇದರಿಂದ ದೃಢವಾಗುತ್ತದೆ. ಇನ್ನುಳಿದಂತೆ ಮೈಸೂರು ಅರಸರ ಸಮಕಾಲೀನರಾದ ಕೆಳದಿ ಅರಸರು ಕೂಡ ತಮ್ಮ ಸೈನ್ಯದಲ್ಲಿ ತೋಪುಖಾನಿ ಸನ್ನಾಹ ತಂತ್ರದ[48] ಪ್ರಯೋಗವನ್ನು ವಿಶೇಷವಾಗಿ ಉಲ್ಲೇಖಿಸಿರುವುದು ಅಂದಿನ ಫಿರಂಗಿದಳದ ಪ್ರಭಾವವನ್ನು ಎತ್ತಿಹಿಡಿಯುತ್ತದೆ.

ಮೈಸೂರು ಒಡೆಯರು ಕೋಟೆಗಳನ್ನು ಪ್ರಾದೇಶಿಕ ಪರಿಸರದಲ್ಲಿನ ಭಿನ್ನತೆ, ಹವಾಗುಣ ರಾಜಕೀಯ ಭದ್ರತೆ, ಆರ್ಥಿಕ ಸಂಪನ್ಮೂಲ ನೈಸರ್ಗಿಕ ರಕ್ಷಣೆಯ ಮೊದಲಾದ ಅಂಶಗಳನ್ನು ಗಮನಿಸಿಯೇ ಕಾಲಕಾಲಕ್ಕೆ ಬದಲಾದ ಆಧುನಿಕ ತಂತ್ರಜ್ಞಾನಗಳಿಗೆ ಅನುಗುಣವಾಗಿ ಮಾರ್ಪಾಡುಗೊಳಿಸಿದರು. ಆಧುನಿಕತೆಯ ಸ್ಪರ್ಶವು ಹೈದರನ ಕಾಲದಲ್ಲಿ ಉತ್ತುಂಗಕ್ಕೇರಿತು. ಶ್ರೀರಂಗಪಟ್ಟಣ ಮತ್ತು ಮೈಸೂರುಗಳಲ್ಲಿ ಕೋಟೆಯ ಪ್ರಮುಖ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಯ ಕೊತ್ತಲಗಳ ಮೇಲೆ ಫಿರಂಗಿಗಳನ್ನಿಡಲಾಯಿತು. ಮೊದಲಿಗೆ ಮೈಸೂರು ರಾಜ್ಯದಲ್ಲಿ ಫಿರಂಗಿಗಳ ಬಳಕೆಯನ್ನು ಮಾಡಿದ ಅರಸರೆಂದರೆ ರಣಧೀರ ಕಂಠೀರವ ನರಸರಾಜ ಒಡೆಯರು, ಏಕೆಂದರೆ ಕ್ರಿ.ಶ.1638ರ ವೇಳೆಯಲ್ಲಿ ಬಿಜಾಪುರದ ಸೈನಿಕರು ರಣದುಲ್ಲಾಖಾನ್ ಎಂಬ ಸೈನ್ಯಾಧಿಕಾರಿಯ ನೇತೃತ್ವದಲ್ಲಿ ಮೈಸೂರಿನ ಮೇಲೆ ಆಕ್ರಮಣ ಮಾಡಿದರು. ಶ್ರೀರಂಗಪಟ್ಟಣ ಕೋಟೆಯ ಆಗ್ನೇಯ ಮತ್ತು ಈಶಾನ್ಯ ಪಾರ್ಶ್ವಗಳಲ್ಲಿ ಎರಡು ಸುರಂಗಗಳನ್ನು ತೋಡಿ ಕೋಟೆಗೋಡೆಯು ಬಿದ್ದುಹೋಗುವಂತೆ ಬಹಳ ಮದ್ದುಗುಂಡುಗಳನ್ನು ತುಂಬಿ ಸುರಂಗಗಳಿಗೆ ಬೆಂಕಿ ಹಚ್ಚಿದಾಗ ಸುರಂಗದ ಸಿಡಿತಕ್ಕೆ ಕೋಟೆಗೋಡೆಯು ಬಿದ್ದುಹೋಯಿತು. ಹಲವಾರು ಸೈನಿಕರು ಮತ್ತು ಸಾಮಾನ್ಯ ಜನರು ಪ್ರಾಣವನ್ನು ಕಳೆದಕೊಂಡರು. ಈ ಘಟನೆಯ ನಂತರ ಶತ್ರುಗಳಿಂದ ರಾಜಧಾನಿಯನ್ನು ರಕ್ಷಿಸಲು ಚಾಮರಾಜ ಒಡೆಯರು ಮೈಸೂರಿನಲ್ಲಿ ಅಲಗಿನ ಚಾವಡಿ ಎಂಬ ಇಲಾಖೆಯನ್ನು ಸ್ಥಾಪಿಸಿದರು. ಆಯುಧ ತಯಾರಿಕಾ ಇಲಾಖೆಯಲ್ಲಿ ಫಿರಂಗಿಗಳನ್ನು ತಯಾರಿಸಿ ಕೋಟೆಯ ಕೊತ್ತಲಗಳಲ್ಲಿ ತಲಾ ಒಂದೊಂದು ಫಿರಂಗಿಗಳನ್ನು ಇರಿಸಿದರು. ಅವುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ಕೋಟೆಯ ದಿಕ್ಕು/ಸ್ಥಾನ. | ಫಿರಂಗಿಗಳ ಹೆಸರು. | ಫಿರಂಗಿಗಳ ವಿಸ್ತೀರ್ಣ. (ಉದ್ದ ಮತ್ತು ಸುತ್ತಳತೆಗಳಲ್ಲಿ) | ಗುಂಡುಗಳ ಅಳತೆ (ಅಂಗುಲಗಳಲ್ಲಿ) | |
|---|---|---|---|---|---|
| 1. | ಆಗ್ನೇಯ ಭಾಗ | ರಾಮಚಂದ್ರ | 10x2 | 6 ಅಂಗುಲ | |
| 2. | ನೈರುತ್ಯ ಭಾಗ | ರಾಮಚಂದ್ರ | 12x2 | 5 | |
| 3. | ಅರಮನೆಯ ಹಿಂದೆ ಮಣ್ಣು ಕೊತ್ತಲದಲ್ಲಿ | ಮುದ್ದುಕೃಷ್ಣ | 8x2 | 8 | |
| 4. | ಈಶಾನ್ಯ ದಿಕ್ಕಿನ ಚಾಮುಂಡೇಶ್ವರಿ ಕೊತ್ತಲ | ಲಕ್ಷ್ಮೀರಮಣ | 21x5 | 9 | |
| 5. | ವಾಯುವ್ಯ ಭಾಗ | ಚಾಮುಂಡೇಶ್ವರಿ | 10x3 | – | |
| 6. | ಪೂರ್ವದ ಹುಲಿಮುಖದ ಕೊತ್ತಲ | ನಾಗರಮರಿ | 7x1 | 2 | |
| 7. | ಪೂರ್ವದ ಚಿಣ್ಣಗೌಡ ಹಟ್ಟಿ ಬಳಿ | ರಂಗನಾಥ | 14x2 | 5 | |
| 8. | ಪೂರ್ವಾಭಿಮುಖ | ಭೈರವ | 14x3 | 4 | |
| 9. | ಈಶಾನ್ಯ ದಿಕ್ಕು | ರಾಮಬಾಣ | 14x3 | 6 | |
| 10. | ತೆಂಕಣ ಭಾಗ | ಉಗ್ರನರಸಿಂಹ | 10x2 | 5 | |
| 11 | ಅದೇ., | ಚಿಕ್ಕಫಿರಂಗಿ | – | – | |

ಮೈಸೂರು ಕೋಟೆಯಲ್ಲಿರಿಸಿದ್ದ ಫಿರಂಗಿಗಳ ಸ್ಥಾನ, ಹೆಸರು ಗಾತ್ರ, ಗುಂಡುಗಳ ಅಳತೆಯು[49] ಈ ಮೇಲ್ಕಂಡ ಪಟ್ಟಿಯಲ್ಲಿ ನೀಡಲಾಗಿದೆ. ಇನ್ನು ಚಿಕ್ಕದೇವರಾಜ ಒಡೆಯರು(ಕ್ರಿ.ಶ.1673–1704) ವಿವಿಧ ಪಾಳೆಯಗಾರರನ್ನು ಸೋಲಿಸಿ ತಮ್ಮ ರಾಜ್ಯದ ಗಡಿಗಳನ್ನು ವಿಸ್ತರಿಸಿದರು. ಈ ಸಂದರ್ಭದಲ್ಲಿ ಮೈಸೂರಿನ ಮೇಲೆ ಮರಾಠರ ಶಿವಾಜಿ ಮತ್ತು ಮೊಗಲರ ಸೇನಾನಿ ಖಾಸಿಂಖಾನ್ ದಾಳಿಮಾಡಿದರು. ಕೂಡಲೇ ಮೈಸೂರಿನ ಅರಸರು ಶ್ರೀರಂಗಪಟ್ಟಣದ ಕೋಟೆಯನ್ನು ಬಲಪಡಿಸಿ ಕೋಟೆಯ ವಿವಿಧ ಭಾಗಗಳಲ್ಲಿ ಫಿರಂಗಿಗಳನ್ನಿಡಿಸಿದರು. ಅವುಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ. ಶ್ರೀರಂಗಪಟ್ಟಣದ ಒಳಕೋಟೆಯಲ್ಲಿ ಹೊಸಕೇರಿಯ ಹನುಮಂತನ ಕೊತ್ತಲದಲ್ಲಿ ಒಂದು. ರಾಮ–ಬಲರಾಮ ಎಂಬ ಮೂಲೆಯ ಕೊತ್ತಲಗಳಲ್ಲಿ ರಾಮ–ಬಲರಾಮ ಎಂಬ ಅದೇ ಹೆಸರಿನ ಫಿರಂಗಿಗಳು ಎರಡು.[50] ನಾಗಮಂಗಲದ ಚನ್ನಯ್ಯನ ಕೊತ್ತಲ ಬಳಿಯ ಹುಚ್ಚುನಾರಸಿಂಹ ಕೊತ್ತಲದಲ್ಲಿ 2, ಬೇಡಗೇರಿಯ

ವಿಷ್ಣು ಚಕ್ರದ ಕೊತ್ತಲದಲ್ಲಿ ದೊಡ್ಡ ಫಿರಂಗಿ 1, ಮರದ ಕೇರಿಯ ಭೂತನಾಥ ಕೊತ್ತಲದಲ್ಲಿ 1, ಹುಲ್ಲುಮೆದೆಯ ಬಳಿಯಲ್ಲಿ 1, ಚಾಮುಂಡೇಶ್ವರಿ ಕೊತ್ತಲದಲ್ಲಿ 1, ಸಿಡಿಲು ಮಲ್ಲನ ಕೊತ್ತಲದಲ್ಲಿ 1, ಬ್ರಹ್ಮಪುರದ ನಾಗರಮರಿ ಕೊತ್ತಲದಲ್ಲಿ 1, ಬಸವನಗುಡಿ ಬಳಿಯ ಸಿಡಿಲಮರಿ ಕೊತ್ತಲದಲ್ಲಿ 1, ಹೀಗೆ ಒಳಕೋಟೆಯಲ್ಲಿ ಕೆಲವೆಡೆ ಎರಡು ಉಳಿದಂತೆ ತಲಾ ಒಂದೊಂದು ಫಿರಂಗಿಗಳನ್ನು ಇರಿಸಿದರು. ಇನ್ನು ಕೋಟೆಯ ಹೊರಭಾಗದಲ್ಲಿ ಕೂಡ ಪ್ರಮುಖವಾದ ಸ್ಥಳಗಳಲ್ಲಿ ಎರಡೆರಡು ಫಿರಂಗಿಗಳನ್ನು ಇರಿಸಿದರು. ದೊಡ್ಡಕೊಳದ ಬಳಿಯಲ್ಲಿರುವ ರಾಮಲಿಂಗನ ಕೊತ್ತಲದಲ್ಲಿ 1, ಕೃಷ್ಣ ದಿಡ್ಡಿಯ ಬಳಿಯಿರುವ ಗೋಪಾಲಕೃಷ್ಣನ ಕೊತ್ತಲದಲ್ಲಿ ಚಿಕ್ಕೇ ಅರಸಿನವರ ಕೊತ್ತಲದಲ್ಲಿ ಚೂರಿಕಾನನ ಕೊತ್ತಲದಲ್ಲಿ 1, ಅನಂತಯ್ಯನ ಮನೆಯ ಬಳಿ ರಾಣಭೀಮನ ಕೊತ್ತಲದಲ್ಲಿ ರಣಭೀಮ, ರಣಶೂರು ಎಂಬ 2 ಫಿರಂಗಿಗಳು ಮೂಡಣ ದಿಕ್ಕಿನ ಬಡಗಚಾರಿ ವೆಂಕಟ್ಟಾಚಲನ ಕೊತ್ತಲದಲ್ಲಿ 1 ತೆಂಕಚಾರಿಯ ಚಾಮುಂಡಿ ಕೊತ್ತಲದಲ್ಲಿ 1, ತೆಂಕಚಾರಿಯ ಬೇಟೆರಾಯನ ಕೊತ್ತಲದಲ್ಲಿ 1, ಮೂಲೆಯ ಪ್ರಳಯಕಾಲ ರುದ್ರ–ಪ್ರಳಯಕಾಲ ಭೈರವ ಕೊತ್ತಲುಗಳಲ್ಲಿ 2, ಕೋಟೆನಲ್ಲೂರಿನ ಮನೆಯ ಬಳಿಯ ಧನಂಜಯನ ಕೊತ್ತಲದಲ್ಲಿ 1, ಚಿಕ್ಕೇ ಅರಸಿನವರ ಕಣಜದ ಬಳಿಯಲ್ಲಿನ ಮುದ್ದುಕೃಷ್ಣನ ಕೊತ್ತಲದಲ್ಲಿ 1, ಕೋಟೆಗಾರೆಹಟ್ಟಿಯ ಬಳಿ ಚಲುವರಾಯನ ಕೊತ್ತಲದಲ್ಲಿ 1 ಮೈಸೂರ ಬಾಗಿಲಿನ ಜಯ–ವಿಜಯ ಕೊತ್ತಲಗಳಲ್ಲಿ 2, ಚಿಕ್ಕರಾಮಬಾಣ ಕೊತ್ತಲದಲ್ಲಿ 1, ಸೇತುವೆಯ ಬಾಗಿಲ ವಾಡದಲ್ಲಿ ಫಿರಂಗಿ 1, ಅಲ್ಲದೆ ಇತರೆ 14, ಫಿರಂಗಿಗಳನ್ನು ಇರಿಸಿದರು[51]. ಈ ಫಿರಂಗಿಗಳ ಒಟ್ಟು ಮೊತ್ತ 44. ಇಮ್ಮಡಿ ಕೃಷ್ಣರಾಜ ಒಡೆಯರು ಹೈದರ್ ಅಲಿಯನ್ನು ದಿಂಡಿಗಲ್ಲಿನ ಫೌಜುದಾರನನ್ನಾಗಿ ನೇಮಿಸಿದರು. ಹೈದರನ ಕಾಲದಲ್ಲಿ ಫಿರಂಗಿಗಳನ್ನು ಯುದ್ಧಗಳಲ್ಲಿ ಹೆಚ್ಚಾಗಿ ಬಳಕೆಮಾಡಲಾಯಿತು. ಹೈದರನ ಮೇಲಿನ ಅಸೂಯೆ ಮತ್ತು ಅರಸನ ಮೇಲಿನ ಸಿಟ್ಟಿನಿಂದ ಕೆಲವೊಂದು ಅರಸನ ವಿರೋಧಿಗಳೊಂದಿಗೆ ಸೇರಿಕೊಂಡು ಮೈಸೂರಿನ ಸಿಂಹಾಸನವನ್ನು ತಾನೇ ಏರಬೇಕೆಂಬ ದುರಾಸೆಯಿಂದ ಕರಾಚೂರಿ ನಂಜರಾಜಯ್ಯನು ಶ್ರೀರಂಗಪಟ್ಟಣದ ಅರಮನೆಯ ಬಾಗಿಲಿಗೆ ನಾಲ್ಕು ಫಿರಂಗಿಗಳನ್ನು ಎತ್ತಿಕಟ್ಟಿ ಗುಂಡುಗಳನ್ನು ಹೊಡೆಸಿದನು[52] ಹೊರಗಿನ ಶತ್ರುಗಳು ಅರಮನೆಗೆ ದಾಳಿ ಮಾಡುವ ಬದಲು ಅರಸನ ಸಂಬಂಧಿಯೊಬ್ಬನಿಂದ ಈ ರೀತಿಯ ದಾಳಿಯಾಗಿದ್ದು ತುಂಬಾ ಅಪಮಾನಕರವಾದ ಸಂಗತಿಯಾಗಿದೆ. ಈ ಘಟನೆಯು ನಮ್ಮವರೇ ನಮಗೆ ಶತ್ರುಗಳೆಂಬುದನ್ನು ಕುರಿತು ಸುಲಭವಾಗಿ ಅರ್ಥೈಸುತ್ತದೆ. ಹೈದರಾಲಿಯು ಕ್ರಿ.ಶ.1780ರ ಆರ್ಕಾಟಿನ ಮುತ್ತಿಗೆಯಲ್ಲಿ ತನ್ನೊಡನೆ 300 ತೋಪುಗಳು ಮತ್ತು ಅದಕ್ಕೆ ಬೇಕಾದಷ್ಟು ಗನ್ನರ್, ಮಕರಡಿಬ್ಬಿ, ಬಾರೊದು ಗೋಲಿಗಳನ್ನು ಕೊಂಡೊಯ್ದನು. ಶ್ರೀರಂಗಪಟ್ಟಣದ ದರಿಯಾದೌಲತ್‌ನ ಪಶ್ಚಿಮ ಗೋಡೆಯ ಮೇಲಿರುವ ಪೊಲಿಲೂರು ಯುದ್ಧದ ವರ್ಣಚಿತ್ರಗಳಲ್ಲಿ ಕೂಡ ಸಿಡಿಮದ್ದಿನ ಆಯುಧಗಳನ್ನು ಚಿತ್ರಿಸಲಾಗಿದೆ. ಅವುಗಳಲ್ಲಿ ಎರಡನೆಯ ಸಾಲಿನಲ್ಲಿರುವ ಯುದ್ಧದ ಹೋರಾಟದ ದೃಶ್ಯಗಳಲ್ಲಿ ಬ್ರಿಟಿಷ್ ಸೈನಿಕರು ಬಂದೂಕುಗಳನ್ನು ಹಿಡಿದಿದ್ದಾರೆ. ಆದರೆ ಮೈಸೂರಿನ ಸ್ಥಳೀಯ ಸೈನಿಕರು ಫಿರಂಗಿ, ಮದ್ದುಗುಂಡುಗಳ ಮಧ್ಯದಲ್ಲಿ ದೇಶೀಯ ಶಸ್ತ್ರಾಸ್ತ್ರಗಳಾದ ಖಡ್ಗ, ಗುರಾಣಿ, ಈಟಿ, ಬಿಲ್ಲು, ಬಾಣಗಳನ್ನು ಹಿಡಿದು ನಿಂತಿದ್ದಾರೆ. ಶ್ರೀರಂಗಪಟ್ಟಣದ ಪತನದ ತೈಲವರ್ಣ ಚಿತ್ರದಲ್ಲಿ ಫಿರಂಗಿಗಳು ಸ್ಫೋಟಗೊಳ್ಳುತ್ತಿರುವ ಚಿತ್ರಣಗಳನ್ನು ಕಾಣಬಹುದಾಗಿದೆ.

ಮೈಸೂರಿನ ಅರಸರ ಖಾಸಗಿ ಅರಮನೆಯಲ್ಲಿ ಹಿತ್ತಾಳೆಯ ಫಿರಂಗಿ ಮಾದರಿಯ ಕೈಗೋವಿಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಫಿರಂಗಿಗಳ ಮಾದರಿಗಳಷ್ಟೇ. ಅಲ್ಲದೆ ಜಗನ್ಮೋಹನ ಅರಮನೆಯಲ್ಲಿನ ಆಯುಧಾಗಾರದಲ್ಲಿ 3ನೇ ಕೃಷ್ಣರಾಜ ಒಡೆಯರ್ ಕಾಲದಲ್ಲಿ ತಯಾರಾದ ಫಿರಂಗಿಗಳು, ಬಂದೂಕುಗಳು ಕಂಡುಬರುತ್ತವೆ. ಈ ಬಂದೂಕುಗಳು ಆಪತ್ಕಾಲದಲ್ಲಿ ಬಳಕೆಯಾಗುವಂತೆ ಊರುಗೋಲಿನ ರೀತಿ 1 ಬಂದೂಕನ್ನು ತಯಾರಿಸಲಾಗಿದೆ. ಹೈದರನು ಬಾರಿಲಾಖೆಯಲ್ಲಿ ಸೈನ್ಯವನ್ನು ವ್ಯವಸ್ಥೆಗೊಳಿಸಿದಾಗ 96 ಫಿರಂಗಿಗಳಿದ್ದವು.[53] ಕ್ರಿ.ಶ.1814ರಲ್ಲಿ ನಡೆದ ಆಂಗ್ಲೋ–ಮರಾಠ ಯುದ್ಧದಲ್ಲಿ ಆಂಗ್ಲರ ಸಹಾಯಕ್ಕೆ ಮೈಸೂರಿನ ಸೇನೆಯು ಕಳುಹಿಸಲ್ಪಟ್ಟ ಸಂದರ್ಭದಲ್ಲಿ ಸಿಲಾದಾರರಿಗೆ ಸಾಂಪ್ರದಾಯಿಕ ಆಯುಧಗಳಾದ ಕತ್ತಿ, ಗುರಾಣಿ, ಭಲ್ಲೆಗಳ ಜೊತೆಗೆ ಬಂದೂಕು ಮತ್ತು ಪಿಸ್ತೂಲುಗಳನ್ನು ನೀಡಿದ್ದರು.[54]

ಮೈಸೂರಿನ ಕೋಟೆಕೊತ್ತಲಗಳಲ್ಲಿ ಇರಿಸಿದ್ದ ಗುಂಡುಗಳ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ಗುಂಡುಗಳು | ಗುಂಡುಗಳ ಸಂಖ್ಯೆ (ಸಾವಿರಗಳಲ್ಲಿ) |
|---|---|---|
| 1 | ಹಿಂದಿನಿಂದ ವಿಲಂಬಿ ಸಂವತ್ಸರದವರೆಗಿದ್ದ ದೊಡ್ಡ ಗುಂಡುಗಳು | 1,927 |
| 2 | ಸಣ್ಣಗುಂಡುಗಳು | 6,000 |
| 3 | ಹೆರಿಳೆಕಾಯಿ ಗಾತ್ರದ ಗುಂಡುಗಳು | 3,000 |
| 4 | ಕಬ್ಬಿಣದ ಗುಂಡುಗಳು | 23,000 |
| 5 | ವಿಕಾರಿ ಸಂವತ್ಸರದಲ್ಲಿ ಮಾಡಿದ ದೊಡ್ಡ ಗುಂಡುಗಳು | 4,500 |
| 6 | ಚಿಕ್ಕ ಗುಂಡುಗಳು | 5,312 |
| | **ಒಟ್ಟು ಗುಂಡುಗಳು** | **43,739** [55] |

ಪ್ರತಿಯೊಂದು ಕೊತ್ತಲದ ಮೇಲಿರಿಸಿದ ಫಿರಂಗಿಗಳು 11, ಉಗ್ರಾಣದಲ್ಲಿದ್ದ ಚಿಕ್ಕ 8 ಫಿರಂಗಿಗಳು, ಅರಮನೆಯ 1 ಫಿರಂಗಿ, ಇತರೆ 16 ಫಿರಂಗಿಗಳಂತೆ ಒಟ್ಟು 32 ಫಿರಂಗಿಗಳಿಗೆ ಒದಗಿಸಲಾಗಿದ್ದ ಒಟ್ಟು ಗುಂಡುಗಳು ಸಹ ಈ ಕೆಳಗಿನಂತಿವೆ.

| ಕ್ರ.ಸಂ | ಗುಂಡುಗಳ ಗಾತ್ರ | ಗುಂಡುಗಳ ಸಂಖ್ಯೆ |
|---|---|---|
| 1 | ದೊಡ್ಡ ಗುಂಡು | 9,898 |
| 2 | ಚಿಕ್ಕಗುಂಡು | 7,312 |
| 3 | ಇತರೆ ಗುಂಡು | 4,360 |
| 4 | ಸಣ್ಣಗುಂಡು | 6,300 |
| 5 | ಕಬ್ಬಿಣದ ಗುಂಡು | 2,624 |
| 6 | ಅರಿತು ಗುಂಡು | 30,495 |
| | **ಒಟ್ಟು ಗುಂಡುಗಳ ಸಂಖ್ಯೆ** | **60,989** [56] |

ವಿಜಯನಗರದ ಕಾಲದಿಂದ ಹಿಡಿದು ಇಮ್ಮಡಿ ರಾಜಒಡೆಯ ಕಾಲದವರೆಗೂ ಕಲ್ಲಿನ ಫಿರಂಗಿ ಗುಂಡುಗಳನ್ನು ಬಳಸಲಾಗುತ್ತಿತ್ತು. ಆದರೆ ರಣಧೀರ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಫಿರಂಗಿ ಗುಂಡುಗಳಲ್ಲಿ ಮಹತ್ತರವಾದ ಬದಲಾವಣೆಗಳಾದವು. ಫಿರಂಗಿ ಗುಂಡುಗಳ ಒಳಗೆ ಚೂರಿ, ಕತ್ತರಿ, ಕಠಾರಿ, ಮೊಳೆ, ಸಣ್ಣ ಗುಂಡುಗಳನ್ನು ತುಂಬಿ ಹೊರಗೆ ಲೋಹದ ತೆಳುವಾದ ಹೊದಿಕೆಯನ್ನು ಗುಂಡಾಕಾರ ವಾಗಿರುವಂತೆ ತಯಾರಿಸಲಾಗುತ್ತಿತ್ತು. ಫಿರಂಗಿಯಿಂದ ಗುಂಡುಗಳು ಹಾರಿ ನಿರ್ಧಿಷ್ಟ ಗುರಿಯನ್ನು ತಲುಪಿ ಸಿಡಿದ ಕೂಡಲೇ; ಅವುಗಳ ಒಳಗಿದ್ದ ಆಯುಧಗಳು ಒಂದಕ್ಕೊಂದು ಘರ್ಷಣೆಗೆ ಒಳಪಟ್ಟು ಚೂರುಚೂರಾಗಿ ಬಿದ್ದ ಸ್ಥಳದಿಂದ ಸುಮಾರು ದೂರದವರೆಗೆ ಹರಡಿ ಪ್ರಾಣಿಗಳು, ಮಾನವರೆನ್ನದೆ ಎಲ್ಲಾ ಜೀವಿಗಳು ಸಾವನ್ನಪ್ಪುವಂತೆ ಮಾಡುತ್ತಿದ್ದವು. ಈ ಗುಂಡುಗಳ ಜೊತೆಗೆ ತುಪಾಕಿ ಗುಂಡುಗಳನ್ನೂ ಇರಿಸಲು ಮೈಸೂರಿನಲ್ಲಿ ಅಲಗಿನ ಚಾವಡಿ ಎಂಬ ಆಯುಧಾಗಾರದ ವಿಭಾಗವನ್ನೇ ಚಾಮರಾಜ ಒಡೆಯರು ಆರಂಭಿಸಿದ್ದರು.

ಈ ಮೊದಲೇ ತಿಳಿಸಿದಂತೆ ಸಿಡಿಮದ್ದನ್ನು ತಯಾರಿಸಲು ಅಗತ್ಯವಾದ ವಸ್ತುಗಳನ್ನು ಅನುಪಾತದ ಪ್ರಮಾಣದಲ್ಲಿ ಸೇರಿಸಲಾಗುತ್ತಿತ್ತು. ಈ ಮೊದಲೇ ತಿಳಿಸಿದಂತೆ ಗಂಧಕ 11.9, ಇದ್ದಿಲು 13.5, ಪೆಟ್ಲುಪ್ಪು 24.6ರ ಅನುಪಾತದಲ್ಲಿ ಬೆರೆಸಿ ಉತ್ತಮ ಗುಣಮಟ್ಟದ ಮದ್ದನ್ನು ತಯಾರಿಸಲಾಗುತ್ತಿತ್ತು. ಹೀಗೆ ತಯಾರಿಸಲಾದ ಸಿಡಿಮದ್ದನ್ನು ಬಂದೂಕುಗಳಿಗೂ ಬಳಸಲಾಗುತ್ತಿತ್ತು. ಇದೇ ವಿಧಾನವನ್ನು ಬಳಸಿ ಮೈಸೂರು ಒಡೆಯರಲ್ಲದೆ ಅವರ ಸಮಕಾಲೀನ ಪಾಳೆಯಗಾರರು ಕೂಡ ತಮಗೆ ಅವಶ್ಯಕವಾಗಿದ್ದ ಸಿಡಿಮದ್ದನ್ನು ತಯಾರಿಸಿಕೊಳ್ಳುತ್ತಿದ್ದರು. ಚಿತ್ರದುರ್ಗದ ಪಾಳೆಯಗಾರರು ಕೋಟೆಯ ಒಳಭಾಗದಲ್ಲಿ ಆಗ್ನೇಯ ದಿಕ್ಕಿನಲ್ಲಿ (ಕಾಮನ ಬಾಗಿಲ ಸಮೀಪ) ಮದ್ದನ್ನು ಅರೆಯುವ ಕಲ್ಲನ್ನು ಸ್ಥಾಪಿಸಿದ್ದಾರೆ. ಸು. ಆರುವರೆ ಮೀಟರ್ ವ್ಯಾಸ ಮತ್ತು ಎರಡು ಮೀಟರ್ ಆಳವಿರುವ ವರ್ತುಲಾಕಾರದ ಬಾವಿಯೋಪಾದಿಯ ಒಂದು ಕಲ್ಲು ಕಟ್ಟಡವಿದೆ. ಅದರ ಒಳಗೆ ಇಳಿಯಲು ಉತ್ತರ ಮತ್ತು ದಕ್ಷಿಣ ದಿಕ್ಕುಗಳ ಎರಡೂ ಕಡೆಗಳಲ್ಲಿ ಮೆಟ್ಟಿಲುಗಳಿವೆ. ಈ ಕಟ್ಟಡದ ನಾಲ್ಕು ದಿಕ್ಕಿನಲ್ಲಿಯೂ ಭಾರಿಗಾತ್ರದ ಬೀಸುವ ಕಲ್ಲಿನ ಕೆಳಗಿನ ಭಾಗ ಸುಮಾರು 56 ಸೆಂಟಿಮೀಟರ್ ದಪ್ಪವಿದ್ದರೆ ಮೇಲಿನ ಭಾಗ ಸುಮಾರು 26 ಸೆಂ.ಮೀ. ದಪ್ಪನಾಗಿವೆ. ಮಧ್ಯದ ತಗ್ಗಿನ ಭಾಗದಲ್ಲಿ ತಿರುಗುಣಿ ಯಂತ್ರವನ್ನು ಸೇರಿಸಿ ಗಾಣದಂತೆ ತಿರುಗಿಸುತ್ತಿದ್ದರು. ಈ ಚಲನೆಯಿಂದ ಮಧ್ಯದ ಚಕ್ರವು ತಿರುಗಿ, ಅದಕ್ಕೆ ಜೋಡಿಸಿದ ಸುತ್ತಲಿನ ನಾಲ್ಕು ಬೀಸುವ ಕಲ್ಲುಗಳು ಏಕಪ್ರಕಾರವಾಗಿ ತಿರುಗುವಂತೆ ಮಾಡಿದ್ದರು. ಈ ಶಿಲಾಯಂತ್ರವನ್ನು ಮದ್ದಿನ ತಯಾರಿಕೆಯಲ್ಲಿ ಬಳಸಲಾಗುತ್ತಿತ್ತು. ಈ ರೀತಿಯ ತಂತ್ರಜ್ಞಾನದಿಂದ ಕೂಡಿದ ಮದ್ದುಬೀಸುವ ಯಂತ್ರಗಳು ಎಲ್ಲೂ ಇದ್ದಂತಿಲ್ಲ. ಬಂದೂಕಿನ ಗುಂಡುಗಳನ್ನು ಅಚ್ಚುಮಾಡುವ ಮೂಸೆಗಳೂ ಕೂಡ ಹತ್ತಿರದಲ್ಲಿಯೇ ಸಿಕ್ಕಿವೆ. ಈ ಬೀಸುವ ಕಲ್ಲಿನ ಹತ್ತಿರದಲ್ಲಿಯೇ ಒಂದು ಭಗ್ನಾವಶೇಷವಾದ ಕಟ್ಟಡವಿದೆ. ಇದನ್ನು ಶಸ್ತ್ರಾಗಾರವೆಂದು ಹೇಳುತ್ತಾರೆ. ಬೊಂಬೆಮನೆಯ ಹತ್ತಿರ ಅರ್ಧಗೋಲಾಕಾರದ ಗುಳಿಗಳುಳ್ಳ, ಸುಟ್ಟ ಮಣ್ಣಿನಂತಹ ಮುದ್ದೆಗಳು ಕಂಡುಬರುತ್ತವೆ. ಇವು ಫಿರಂಗಿ ಗುಂಡುಗಳನ್ನು ಎರಕ ಹೊಯ್ಯುತ್ತಿದ್ದ ಅಚ್ಚುಗಳೆಂದು ಹೇಳುತ್ತಾರೆ. ಆದರೆ ಹುತ್ರಿದುರ್ಗದಲ್ಲಿ ಅರಮನೆಯ ಅವಶೇಷದ ಪೂರ್ವದಿಕ್ಕಿಗಿರುವ ಸೈನಿಕರ ವಸತಿ ನಿಲಯದ ಅವಶೇಷಗಳ ಸಮುಚ್ಚಯದಲ್ಲಿ ಮದ್ದನ್ನು ಅರೆಯುವ ಕಲ್ಲಿನ ಒಂದು ಭಾಗವು ಮಾತ್ರ ದೊರೆತಿದೆ. ನಿಜಗಲ್ಲುದುರ್ಗದಲ್ಲೂ ಸಹ ಇದೇ ಮಾದರಿಯ ಮದ್ದನ್ನು ಅರೆಯುವ ಕಲ್ಲು ಕಂಡುಬರುತ್ತದೆ. ಕೋಟೆಗಳ ರಕ್ಷಣೆಗಾಗಿ ಮದ್ದನ್ನು ಸ್ಥಳೀಯವಾಗಿಯೇ ತಯಾರಿಸಿಕೊಳ್ಳಲು ಇವುಗಳನ್ನು ಬಳಸಿಕೊಳ್ಳುತ್ತಿದ್ದರು.

ಕೋಟೆಗಳಲ್ಲಿ ನಿರ್ಮಾಣವಾಗುತ್ತಿದ್ದ ಮದ್ದಿನ ಮನೆಗಳಲ್ಲಿ ಸಿಡಿಮದ್ದನ್ನು ಸಂಗ್ರಹಿಸಲು ಪ್ರತ್ಯೇಕವಾದ ಭಾಗವೇ ಇರುತ್ತಿತ್ತು. ಏಕೆಂದರೆ ಸಿಡಿಮದ್ದನ್ನು ತಂಪಾದ, ಒಣಹವೆಯನ್ನು ಹೊಂದಿರುವ ಪ್ರದೇಶದಲ್ಲಿ ಶೇಖರಿಸಿದರೆ ತುರ್ತುಪರಿಸ್ಥಿತಿಗಳಲ್ಲಿ ಸುಲಭವಾಗಿ ಬಳಸಬಹುದಾಗಿದೆ. ಆಕಸ್ಮಿಕವಾಗಿ ಸಿಡಿಮದ್ದು ನೀರಾವಿಯ ಸಂಪರ್ಕಕ್ಕೆ ಒಳಪಟ್ಟರೆ ಬೆಂಕಿಯನ್ನು ಹೊತ್ತಿಸಿದಾಗ ಉಷ್ಣತೆಯ ಸಂಪೀಡನೆಗೆ ಒಳಗಾಗುವುದು ತುಂಬಾ ನಿಧಾನ. ಅತಿಯಾದ ಉಷ್ಣ ಹವೆಯ ಸಂಪರ್ಕಕ್ಕೆ ಬಂದರೆ ತಕ್ಷಣವೇ ಬೆಂಕಿ ಹೊತ್ತಿಕೊಳ್ಳುತ್ತದೆ. ಆದ್ದರಿಂದ ಸಿಡಿಮದ್ದನ್ನು ಬಹಳ ಜಾಗರೂಕತೆಯಿಂದ ಶೇಖರಿಸುತ್ತಿದ್ದರು.

ರಾಜಒಡೆಯರು ಕ್ರಿ.ಶ.1610ರಲ್ಲಿ ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನು ದಸರಾ ಉತ್ಸವ ಎಂಬ ಹೆಸರಿನಿಂದ ಪ್ರಾರಂಭಿಸಿದರು. ಈ ಉತ್ಸವದ ಮಹಾನವಮಿಯ ದಿನ ಅರಸರು ಸಂಧ್ಯಾವಂದನೆ ಮಾಡಿ ಪಟ್ಟದ ಕತ್ತಿಯನ್ನು ಪೂಜಿಸಿ ಕಳಸ, ಕನ್ನಡಿ, ಪಟ್ಟದ ಆನೆ, ಪಟ್ಟದ ಕುದುರೆಗಳೊಂದಿಗೆ ಕಾವೇರಿಯ ಉತ್ತರ ಪಾರ್ಶ್ವಕ್ಕೆ ತೆರಳಿ ಪೂಜೆಸಲ್ಲಿಸಿ ವಾಪಸ್ಸಾದ ಮೇಲೆ ಬಾಣಬಿರುಸುಗಳು, ಚಕ್ರಬಾಣಗಳು, ಸೂತ್ರಗಳೆಂಬ ಬಾಣಗಳು ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಿದ್ದವು. ಅಲ್ಲದೆ ಅರಸರ ವರ್ಧಂತಿ, ಪುತ್ರೋತ್ಸವ, ನಾಮಕರಣ, ವಿವಾಹ ಮತ್ತು ದಸರಾ ಮೊದಲಾದ ಕಾರ್ಯಕ್ರಮಗಳಲ್ಲಿ ಗನ್‌ಹೌಸಿನಿಂದ 21 ಕುಶಾಲ ತೋಪುಗಳನ್ನು ಹಾರಿಸುತ್ತಿದ್ದರು. ಇವು ಪ್ರಜೆಗಳಿಗೆ ವಿಶೇಷವಾದ ಸಂತಸವನ್ನು ಉಂಟುಮಾಡುತ್ತಿದ್ದ ಕಾರ್ಯಕ್ರಮಗಳಾಗಿದ್ದು ಕ್ರಿ.ಶ.1950ರವರೆಗೂ ನಡೆದುಕೊಂಡು ಬಂದವು. ಮೂರನೇಯ ಆಂಗ್ಲೋ–ಮೈಸೂರು ಯುದ್ಧದಲ್ಲಿ (1790–92) ಶ್ರೀರಂಗಪಟ್ಟಣದ ಒಪ್ಪಂದದ ತರುವಾಯ ಟಿಪ್ಪು ತನ್ನೊಡನೆ ಫಿರಂಗಿದಳದ ದೊಡ್ಡ ತುಕಡಿಯೊಂದಿಗೆ ಸೆಪ್ಟಂಬರ್ 2ರಂದು ಶ್ರೀರಂಗಪಟ್ಟಣದಿಂದ ಸತ್ಯಮಂಗಲದ ಗೆಜ್ಜಲಹಟ್ಟಿ ಕಣಿವೆಯ ಕಡೆ ಸಾಗಿದನು. ಕ್ಯಾಪ್ಟನ್ ಲಿಂಡ್ಸೆ ಶ್ರೀರಂಗಪಟ್ಟಣದ ಬೆಂಗಳೂರು ದ್ವಾರದ ಉತ್ತರ ಭಾಗದ ಮೇಲೆ ದಾಳಿ ಮಾಡಿದಾಗ ಟಿಪ್ಪುವಿನ ಮಾರ್ಗದರ್ಶನದಂತೆ ಸಂಪತ್ತನ್ನು ಬೇರೆಡೆಗೆ ವರ್ಗಾಯಿಸು ಸಂದರ್ಭದಲ್ಲಿ ದಿವಾನ್ ಪೂರ್ಣಯ್ಯನವರು ಫಿರಂಗಿ ಗುಂಡಿನ ದಾಳಿಯಿಂದಾಗಿ ಗಾಯಗೊಂಡರು.[57] ಕರ್ನಲ್ ಹ್ಯಾರಿಸ್ಸನ ಆತ್ಮಚರಿತ್ರೆಕಾರ ವೆಲ್ಲಿಂಗ್‌ಟನ್ ಹೇಳುವಂತೆ ಮೈಸೂರಿನ ಸಾಮರ್ಥ್ಯಯುತವಾದ ಫಿರಂಗಿಯ ಎತ್ತುಗಳ ಸ್ಥಿತಿ ಮತ್ತು ಕರ್ನಾಟಕದ ಎತ್ತುಗಳ ಸ್ಥಿತಿಯು ಕಷ್ಟಕರವಾಗಿದ್ದು, ಟಿಪ್ಪುವಿನ ಸೇನೆಯು ಜಯಪ್ರದವಾದ ಕಾರ್ಯಾಚರಣೆಯನ್ನು ಸೂಚಿಸಿದ್ದವು. ಆದ್ದರಿಂದ ಹುಡುಕಿದರೂ ಸಿಗದಂತಹ ಕಷ್ಟಸಾಧ್ಯವಾದ ಉತ್ತಮ ರಂಗವೇದಿಕೆಯಾಗಿದ್ದ ಮಳವಳ್ಳಿಯ ಎತ್ತರದ ಮೇಲೆ ನಿಂತು ಟಿಪ್ಪುವು ಯುದ್ಧದ ಪ್ರಯೋಗಮಾಡಲು ಮುಂದಾದನು ಎಂದು ಹೇಳಿದ್ದಾನೆ.[58]

**ಕ್ಷಿಪಣಿಗಳು**

ವಿಜಯನಗರ ಸಾಮ್ರಾಜ್ಯದ ಅವನತಿಯಾಗಿದ್ದು ಕೂಡ ಬಿಜಾಪುರದ ಸೇನೆ ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ಬಳಕೆ ಮಾಡಿದ ಸಿಡಿಮದ್ದಿನ ಬಳಕೆಯಿಂದಲೆ. ವಿಜಯನಗರದ ಅವನತಿಯ ನಂತರ ಭಾರತೀಯ ಸ್ಥಳೀಯ ರಾಜಮನೆತನಗಳು ಯುದ್ಧ ಮತು ಯುದ್ಧತಂತ್ರಗಳನ್ನು ಬದಲಾಯಿಸಿಕೊಳ್ಳಲು ಮುಂದಾದವು. ಕ್ರಿ.ಶ.18ನೆಯ ಶತಮಾನದ ಉತ್ತರಾರ್ಧದಲ್ಲಿ ಹೈದರ್ ಅಲಿಯ ಯೂರೋಪಿನ್ ಮಾದರಿಯ ಸೈನಿಕ ತರಬೇತಿ ಮತ್ತು ಟಿಪ್ಪು ಸುಲ್ತಾನರ ಹೊಸ ಸೈನಿಕ ಆವಿಷ್ಕಾರಗಳಿಗೆ ಒಳಗಾದವು.

ಮೈಸೂರು ಒಡೆಯರ ಕಾಲದಲ್ಲಿ ಅರಸರ ವರ್ಧಂತಿ, ಪುತ್ರೋತ್ಸವ, ನಾಮಕರಣ, ವಿವಾಹ ಮತ್ತು ದಸರಾ ಮೊದಲಾದ ಕಾರ್ಯಕ್ರಮಗಳಲ್ಲಿ ಧಾರ್ಮಿಕ ಉತ್ಸವಗಳಲ್ಲಿ ಹಗಲುಬತ್ತಿ, ಹೂಬಾಣ, ನಕ್ಷತ್ರಬಾಣ, ಆಕಾಶಕೊಳವಿ, ಚಕ್ರಬಾಣ, ಸುರವಿ ಮುಂತಾದ ಸಿಡಿಮದ್ದಿನ ಉಪಕರಣಗಳೇ ಮುಂದೆ ವಿಶ್ವ ಇತಿಹಾಸದಲ್ಲಿ ಹೊಸಹೊಸ ಆವಿಷ್ಕಾರಗಳಿಗೆ ಮುನ್ನುಡಿ ಬರೆದವು. ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯಂ', ಲಿಂಗಣ್ಣ ಕವಿಯ 'ಕೆಳದಿ ನೃಪವಿಜಯ' ಮತ್ತು 'ಶ್ರೀಮನ್ಮಹಾರಾಜರ ವಂಶಾವಳಿ' ಕೃತಿಗಳಿಂದ ನಮಗೆ ತಿಳಿದುಬರುತ್ತದೆ. ಫಿರಂಗಿಗಳಿಗೆ ಮೊದಲು ಬಳಸುತ್ತಿದ್ದ ಕಲ್ಲಿನ ಗುಂಡುಗಳಿಗೆ ಬದಲಾಗಿ ಲೋಹದಿಂದ ಟೊಳ್ಳಾದ ಗುಂಡಗಿನ ಹೊದಿಕೆಯನ್ನು ನಿರ್ಮಿಸಿ ಅವುಗಳ ಒಳಗೆ ಚಿಕ್ಕಚಿಕ್ಕ ಚಾಕು, ಕಠಾರಿ, ಕತ್ತರಿ, ಅಲಗು, ಮೊಳೆಗಳು, ಸಣ್ಣಸಣ್ಣ ಗುಂಡುಗಳು[59] ಮೊದಲಾದ ಆಯುಧಗಳೊಂದಿಗೆ ಸಿಡಿಮದ್ದನ್ನು ಸೇರಿಸಿ; ಅವುಗಳನ್ನು ತುಂಬಾ ಸೂಕ್ಷ್ಮವಾಗಿ ಗಾಳಿಯು ಒಳಗೆ ಪ್ರವೇಶಿಸದಂತೆ ಹೊರಕವಚವನ್ನು ಮುಚ್ಚುತ್ತಿದ್ದರು. ಹೀಗೆ ತಯಾರು ಮಾಡಿದ ಗುಂಡುಗಳನ್ನು ಯುದ್ಧದ ಸಂದರ್ಭದಲ್ಲಿ ಫಿರಂಗಿಗಳಿಂದ ಸಿಡಿಸಿ ಅವುಗಳನ್ನು ನಿರ್ದಿಷ್ಟ ಗುರಿಮುಟ್ಟುವಂತೆ ಮಾಡುತ್ತಿದ್ದರು. ಈ ಗುಂಡುಗಳು ಗುರಿಯನ್ನು ತಲುಪಿದ ಕೂಡಲೇ ನೆಲಕ್ಕೆ ಬಿದ್ದು ಸಿಡಿದು ಅದರೊಳಗಿದ್ದ ಆಯುಧಗಳು ಸಿಡಿದು ಚೂರುಚೂರಾಗಿ ಶತ್ರುಗಳ ದೇಹವನ್ನು ಹೊಕ್ಕುತ್ತಿದ್ದವು. ಇದರಿಂದ ಶತ್ರುಸೈನ್ಯವು ಸುಲಭವಾಗಿ ಹಿಮ್ಮೆಟ್ಟುತ್ತಿತ್ತು. ಹೈದರ್ ಅಲಿ ಮತ್ತು ಟಿಪ್ಪೂ ಸುಲ್ತಾನರು ಇದೇ ವಿಧಾನವನ್ನು ಪರಿಷ್ಕರಿಸಿ ಕ್ಷಿಪಣಿ ಅಥವಾ ರಾಕೆಟ್‌ಗಳ ಆವಿಷ್ಕಾರಕ್ಕೆ ಕಾರಣೀಭೂತರಾದರು.

ರಾಕೆಟ್‌ಗಳ ಪ್ರಾಚೀನತೆಯನ್ನು ಕುರಿತು ಹೇಳವುದುದಾದರೆ ಕ್ರಿ.ಶ.1044ರಲ್ಲಿ ಚೀನಾದ ವು–ಚಿಂಗ್ ತ್ಸುಂಗ್–ಯೋ ಎಂಬಾತನು ಮೊದಲು ಸಿಡಿಮದ್ದಿನ ಪುಡಿಯನ್ನು ಕಂಡುಹಿಡಿದನು. ಭಾರತದಲ್ಲಿ ಕ್ರಿ.ಶ.1400ರ ಸಮಯದಲ್ಲಿ ಸಿಡಿಮದ್ದಿನ ಬಳಕೆಗೆ ಜಾರಿಗೆಬಂದಿತು. ಅಗ್ನಿಚೂರ್ಣ(ಸಿಡಿಮದ್ದು), ಅಗ್ನಿಬಾಣ (ರಾಕೆಟ್) ಮತ್ತು ಅಗ್ನಿಕ್ರೀಡಾ(ಸಿಡಿಮದ್ದಿನ ವಸ್ತುಗಳು)ಗಳನ್ನು ಕುರಿತಂತೆ ಅನೇಕ ಸಾಹಿತ್ಯ ಕೃತಿಗಳು ಉಲ್ಲೇಖಿಸುತ್ತವೆ. ಆದರೆ ಮೈಸೂರಿನಲ್ಲಿ ಕ್ರಿ.ಶ.1780–1799ರವರೆಗೆ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಮೊದಲಿಗೆ ಆಧುನಿಕ ರಾಕೆಟ್‌ಗಳನ್ನು ಯುದ್ಧಗಳಲ್ಲಿ ಬಳಸಿದರು.[60]

ಹೈದರ್ ಅಲಿಯು ಆರ್ಕಾಟಿನ ಫೌಜುದಾರನಾಗಿದ್ದ ಸಂದರ್ಭದಲ್ಲಿ ರಾಕೆಟ್ ಬಳಕೆಯ ತಂತ್ರಜ್ಞಾನವನ್ನು ಕಲಿತಿರಬೇಕು. ಈ ಮೊದಲಿಗೆ ಶ್ರೀರಂಗಪಟ್ಟಣದ ಅರಮನೆಯಲ್ಲಿ ವಿಶೇಷ ಸಮಾರಂಭಗಳಲ್ಲಿ ಹಾರಿಸುತ್ತಿದ್ದ ಆಕಾಶಕೊಳವಿಗಳೆ ಮುಂದೆ ಹೈದರ್ ಅಲಿಯ ಸಂಶೋಧನೆಗೆ ಕಾರಣವಾಗಿವೆ. ಕ್ರಿ.ಶ.1767ರ ವೇಳೆಗೆ ಹೈದರನಿಗೆ ರಾಕೆಟ್‌ಗಳ ಪರಿಚಯವಿದ್ದುದರಿಂದ ಆತನೇ ಅವುಗಳನ್ನು ಅಭಿವೃದ್ಧಿ ಪಡಿಸಿದನು. ಟಿಪ್ಪು ಸುಲ್ತಾನನು ತನ್ನ ಆಳ್ವಿಕೆಯಲ್ಲಿ ರಾಕೆಟ್‌ನ ವಿನ್ಯಾಸದಲ್ಲಿ ಕೆಲವೊಂದು ಪರಿಷ್ಕರಣೆ ಮಾಡಿದ್ದಾನೆ. ಕೊಳವೆಗಳ ವಿನ್ಯಾಸವನ್ನು ಕಡಿಮೆ ಮಾಡಿ ಅವುಗಳ ಉದ್ದವನ್ನು ಹೆಚ್ಚಿಸಲಾಯಿತು.[61] ಈ ರೀತಿಯ ಪರಿಷ್ಕರಣೆಯ ಉದ್ದೇಶ ರಾಕೆಟ್ ತನ್ನ ದೂರಗಾಮಿ ಸ್ಥಾನವನ್ನು ನಿರ್ದಿಷ್ಟ ಸಮಯದಲ್ಲಿ ಗುರಿ ತಲುಪುವಂತೆ ಮಾಡುವುದಾಗಿತ್ತು. ಈ ರೀತಿ ಪರಿಷ್ಕರಿಸಿದ ರಾಕೆಟ್‌ನ ನಳಿಕೆಯು 12 ಇಂಚುಗಳ ಉದ್ದ ಮತ್ತು ಒಂದು ಇಂಚು ವ್ಯಾಸವನ್ನು ಹೊಂದಿದ್ದು ಉಕ್ಕಿನಿಂದ ತಯಾರಿಸಲಾಗಿತ್ತು. ಈ ನಳಿಕೆಗೆ ಆಧಾರವಾಗಿದ್ದ ಮರದ ಕಟ್ಟಿಗೆಗಳ ಉದ್ದ 12 ಅಡಿಗಳು.[62] ಒಂದು ಕೆ.ಜಿ ಸಿಡಿಮದ್ದನ್ನು ಒಳಗೊಂಡಿದ್ದ ರಾಕೆಟ್‌ನ ತೂಕ ಎರಡುವರೆಯಿಂದ 3 ಕಿ.ಗ್ರಾಂ.ಗಳಷ್ಟು ತೂಕವನ್ನು ಹೊಂದಿದ್ದವು.

ಉತ್ಕೃಷ್ಟ ಗುಣಮಟ್ಟದ ಉಕ್ಕಿನಿಂದ ಮಾಡಿದ ಕೊಳವೆಗಳನ್ನು ಬಳಸಿ ರಾಕೆಟ್‌ಗಳನ್ನು ತಯಾರಿಸುತ್ತಿದ್ದ ಕಾರಣ ಭಾರತೀಯ ರಾಕೆಟ್‌ಗಳು ಯಶಸ್ವಿಯಾದವು. ಈ ಉಕ್ಕಿನ ಸಿಲಿಂಡರಾಕೃತಿಯ ಕೊಳವೆಗಳನ್ನು ಬಿದಿರಿನ ಬೆತ್ತಕ್ಕೆ ಬಿಗಿದು, ನಂತರ ಕೊಳವೆಯನ್ನು ಮದ್ದಿನಿಂದ ತುಂಬಲಾಗಿತ್ತು. ಅವುಗಳಿಗೆ ಬೆಂಕಿ ತಗುಲಿದ ಕೂಡಲೇ ಕೈಗಳಿಂದಲೇ ಅವುಗಳನ್ನು ಹಾರಿಸಲಾಗುತ್ತಿತ್ತು. ಟಿಪ್ಪುವಿನ ರಾಕೆಟ್‌ಗಳ ಬಗೆಗೆ ವಿಶೇಷ ಅಧ್ಯಯನವನ್ನು ನಡೆಸಿರುವ ವಿಜ್ಞಾನಿ ರೊದ್ದಂ ನರಸಿಂಹ ಅವರು 2.5 ಕಿ.ಮೀಟರ್‌ಗಳ ದೂರದ ನಿಗಧಿತ ಸ್ಥಾನವನ್ನು ತಲುಪುತ್ತಿತ್ತೆಂದು ಹೇಳಿದ್ದಾರೆ.[63] ಟಿಪ್ಪುವಿನ ಸೈನ್ಯದಲ್ಲಿ 5,000 ರಾಕೆಟ್ ಪಡೆಯ ಸೈನಿಕರಿದ್ದರು. ಇವರು ರಾಕೆಟ್‌ನ ಗಾತ್ರ ಮತ್ತು ಗುರಿಯ ದೂರದ ಆಧಾರದ ಮೇಲೆ ರಾಕೆಟ್‌ಗಳನ್ನು ಉಡಾಯಿಸುವ ಎತ್ತರವನ್ನು ನಿಗದಿಪಡಿಸುವ ಕೌಶಲ್ಯ

ಅವರಲ್ಲಿತ್ತು. ಮೂಖನ್ನು ಎತ್ತಿದ ಬಂಡಿಗಳೇ ರಾಕೆಟ್ ಉಡಾವಣಾ ರ್‍ಯಾಂಪ್‌ಗಳನ್ನಾಗಿ ಮಾಡಿಕೊಂಡು ಶೀಘ್ರದಲ್ಲಿಯೇ ಉಡಾಯಿಸುತ್ತಿದ್ದರು.[64]

ಮೈಸೂರು ಸಂಸ್ಥಾವು 3 ಮತ್ತು 4ನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಬಳಸಿದ ಕ್ಷಿಪಣಿಗಳು ಗರಿಷ್ಟ 3.5 ಕಿ.ಗ್ರಾಂ. ತೂಕವನ್ನು ಹೊಂದಿದ್ದವು. ಇವುಗಳು ಸು.ಒಂದೂವರೆ ಮೈಲಿ(ಎರಡುವರೆ ಕಿ.ಮೀ)ಗಳಷ್ಟು ದೂರದ ಗುರಿಯನ್ನು ತಲುಪುತ್ತಿದ್ದವು. ಈ ಕ್ಷಿಪಣಿಗಳನ್ನು ಶತ್ರುಸೈನ್ಯದ ಮೇಲೆ ಉಡಾಯಿಸಲು ದೊಡ್ಡ ಮೊತ್ತದ ಸೈನಿಕರನ್ನೇ ಹೊಂದಿತ್ತು. 3ನೇ ಆಂಗ್ಲೋ–ಮೈಸೂರು ಯುದ್ಧದ ಅಂತ್ಯದಲ್ಲಿ ಮೈಸೂರು ಸೈನ್ಯವು ಎರಡು ರಾಕೆಟ್ ಉಡಾವಣಾ ಘಟಕಗಳನ್ನು ಹೊಂದಿದ್ದು ಮೊದಲನೆಯ ಘಟಕಕ್ಕೆ ದಿವಾನ್ ಪೂರ್ಣಯ್ಯನವರ ನೇತೃತ್ವ ವಹಿಸಿದರೆ 131 ಸೈನಿಕರು ಕ್ಷಿಪಣಿಗಳ ಉಡಾವಣೆಗೆ ನೇಮಕವಾಗಿದ್ದರು.[65] ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧದ(1799) ತರುವಾಯ ಕಂಪನಿ ಸೇನೆಯು ಮೈಸೂರಿನ ರಾಜಧಾನಿ ಶ್ರೀರಂಗಪಟ್ಟಣದ ಸಮೀಪದಲ್ಲಿರುವ ತುರುಕನಹಳ್ಳಿಯ ಮತಾಪು ಕಾರ್ಖಾನೆಯಲ್ಲಿ 700 ರಾಕೆಟ್‌ಗಳನ್ನು ವಶಮಾಡಿಕೊಂಡಿತು. ಅವುಗಳಲ್ಲಿ ಎರಡನ್ನು ಇಂಗ್ಲೆಂಡಿನ ರಾಯಲ್ ಆರ್ಟಿಲರಿ ಮ್ಯೂಸಿಯಂನಲ್ಲಿ ಇರಿಸಲಾಗಿದೆ. ಇವುಗಳಲ್ಲಿ ಒಂದು ರಾಕೆಟ್‌ನ ಕೊಳವೆಯು 5.8 ಸೆಂ.ಮೀ ವ್ಯಾಸವನ್ನು ಮತ್ತು 25.4ಸೆಂ.ಮಿ ಉದ್ದವನ್ನು ಹೊಂದಿದೆ. ಕೊಳವೆಯನ್ನು 1.02.ಮೀ. ಉದ್ದದ ಕತ್ತಿಯೊಂದಕ್ಕೆ ಬಿಗಿಯಲಾಗಿದೆ. ಮತ್ತೊಂದು 3.7 ಸೆಂ.ಮೀ ವ್ಯಾಸ ಮತ್ತು 20 ಸೆಂ.ಮೀ ಕೊಳವೆಯನ್ನು ಹೊಂದಿದೆ. ಅದನ್ನು 1.9ಮೀ. ಉದ್ದದ ಬಿದಿರಿನ ಬೆತ್ತಕ್ಕೆ ಬಿಗಿಯಲಾಗಿದೆ.[66]

ಸಿಮೋನ್ ವೆರ್ರೆಟ್ ಅವರು ಟಿಪ್ಪುವಿನ ಕಾಲದಲ್ಲಿ ನಿರ್ಮಿಸುತ್ತಿದ್ದ ರಾಕೆಟ್‌ಗಳನ್ನು ಕುರಿತು ಹೀಗೆ ದಾಖಲಿಸುತ್ತಾರೆ. 'ಕ್ರಿ.ಶ.16ನೆಯ ಶತಮಾನದ ಭಾರತೀಯ ಸೈನ್ಯದಲ್ಲಿ ಬಳಸುವ ರಾಕೆಟ್‌ಗಳು ವಿಕಾಸ ಹೊಂದಿದವು. ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಅಧೀನದಲ್ಲಿ ಪ್ರಾಯಶಃ ಸಂಸ್ಥಾನದ ಉತ್ತರ ಭಾಗದಲ್ಲಿರುವ ತೀರ್ಥಹಳ್ಳಿಯ ಕೋಟೆಯಲ್ಲಿ ಉತ್ಪಾದನೆಯು ಹೆಚ್ಚಿತ್ತು. ಭಾರತೀಯ ಯುದ್ಧದ ರಾಕೆಟ್‌ಗಳು ಮೃದುವಾಗಿಸುತ್ತಿರುವ ಕಬ್ಬಿಣದ ಕೊಳವೆಯನ್ನು ಹೊಂದಿದೆ. ಇದು 8 ಇಂಚು ಉದ್ದ ಮತ್ತು 6.12ಪೌಂಡ್ ತೂಕವನ್ನು ತೂಗುತ್ತಿತ್ತು. ಒಂದು ಅಥವಾ ಎರಡು ಪೌಂಡ್‌ಗಳ ಸಿಡಿಮದ್ದನ್ನು ತುಂಬಲಾಗುತ್ತಿತ್ತು. ಕೊಳವೆಯನ್ನು ಬಿದಿರಿನ ಕೋಲಿಗೆ ಅಥವಾ ಸ್ಟೀಲ್ ಕತ್ತಿಯ ದಬ್ಬೆಗೆ ಸೇರಿಸಿ ಬಿಗಿಯಲಾಗುತ್ತಿತ್ತು.[67] ಈ ಉಲ್ಲೇಖದಂತೆ ಈಚೆಗೆ ಹೊಸನಗರ ಸಮೀಪದ ನಗರ ಕೋಟೆಯಲ್ಲಿ ದೊರೆತ ರಾಕೆಟ್‌ಗಳ ಅವಶೇಷಗಳು ಇದಕ್ಕೆ ಪುಷ್ಠಿ ನೀಡುತ್ತವೆ.

**ಶ್ರೀರಂಗಪಟ್ಟಣದ ರಾಕೆಟ್ ಉಡಾವಣಾ ಕೇಂದ್ರ**

ಮೈಸೂರು ಒಡೆಯರ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಒಡೆಯರ ಕಾಲದಲ್ಲಿ ಕೋಟೆಯು ನಿರ್ಮಾಣಗೊಂಡಿದ್ದರೂ ಟಿಪ್ಪುಸುಲ್ತಾನನ ಕಾಲದಲ್ಲಿ ರಾಕೆಟ್ ಉಡಾವಣಾ ಕೇಂದ್ರ ಸ್ಥಾಪನೆಯಾಗಿದೆ. ಮೈಸೂರು ದಿಕ್ಕಿಗೆ ಇರುವ ದಿಲ್ಲಿ ಬಾಗಿಲಿನಿಂದ ಕೋಟೆಯ ಒಳಗೆ ಪ್ರವೇಶಿಸಿದರೆ ಸ್ವಲ್ಪ ದೂರದಲ್ಲಿಯೇ ಛಾವಣಿಯಿಲ್ಲದ ಒಂದು ಕಟ್ಟಡದ ಅವಶೇಷವಿದೆ. ಅದೇ ಟಿಪ್ಪುವಿನ ಕಾಲದಲ್ಲಿ ನಿರ್ಮಾಣಕವಾದ ರಾಕೆಟ್ ಉಡಾಡವಣಾ ಕೇಂದ್ರದ ಅಂಕಣ. ಇದು ಸುಮಾರು ಹದಿನೈದು ಅಡಿ ಎತ್ತರದ ವೇದಿಕೆಯ ಮೇಲೆ ನಿರ್ಮಾಣವಾಗಿದ್ದು, 80 ಅಡಿ ಉದ್ದ ಮತ್ತು 40ಅಡಿ ಅಗಲವಾಗಿದೆ. ಈ ವೇದಿಕೆಯನ್ನು ಕುರಿತು ಭಾರತದ ಮಾಜಿ ರಾಷ್ಟ್ರಪತಿ **ಡಾ.ಎ.ಪಿ.ಜೆ. ಅಬ್ದುಲ್ ಕಲಾಂ** ಅವರು **"ವಿಶ್ವದಲ್ಲಿಯೇ ರಾಕೆಟ್‌ಗಳ ಹಾಗೂ ಕ್ಷಿಪ್ಪಣಿಗಳ ಉದಯಕ್ಕೆ ಮಾತೃಭೂಮಿಯಂತಿದೆ"**[68] ಎಂದು ಹೇಳಿದ್ದಾರೆ.

ಟಿಪ್ಪುವಿನ ರಾಕೆಟ್‌ಗಳೆಂಬ ಅದ್ಭುತ ಯುದ್ಧೋಪಕರಣಗಳ ಆವಿಷ್ಕಾರದ ಮಾರ್ಪಾಡುಗಳಿಗೆ ಬ್ರಿಟಿಷರು ನಿಜವಾಗಿಯೂ ಗಾಬರಿಯಾದರು. ಅವರು ಕೂಡ ಮೈಸೂರಿನ ರಾಕೆಟ್‌ಗಳನ್ನು ನಕಲುಮಾಡಿ ಮೈಸೂರಿನ ಅಶ್ವದಳದ ಮೇಲೆ ಪ್ರಯೋಗಿಸಲು ಪ್ರಯತ್ನಿಸಿದರು. ಆದರೆ ಅದು ಪ್ರಯೋಜನಕ್ಕೆ ಬರಲಿಲ್ಲ. ಕಾರಣ ಟಿಪ್ಪು ತನ್ನ ಅಶ್ವಗಳಿಗೆ ರಾಕೆಟ್‌ಗಳು ಶಬ್ದವನ್ನು ಉತ್ಪತ್ತಿ ಮಾಡುತ್ತಿದ್ದ ಬಗೆಗೆ ತರಬೇತಿಯನ್ನು ನೀಡಿದ್ದರಿಂದ ಬ್ರಿಟಿಷ್ ರಾಕೆಟ್‌ಗಳಿಗೆ ಟಿಪ್ಪುವಿನ ಅಶ್ವಗಳು ವಿಚಲಿತಗೊಳ್ಳುತ್ತಿರಲಿಲ್ಲ. ಏಕಕಾಲಕ್ಕೆ ನೂರಾರು ಸಂಖ್ಯೆಯಲ್ಲಿ ಬೆಂಕಿಯನ್ನು ಉಗುಳುತ್ತಾ, ತೂರಿಬರುವ ಬಾಣಬಿರುಸುಗಳು ರಾತ್ರಿಯ ವೇಳೆಯಲ್ಲಿ ಶತ್ರುಗಳಲ್ಲಿ ನಿಜಕ್ಕೂ ಆತಂಕವನ್ನು ಉಂಟುಮಾಡುತ್ತಿದ್ದವು.[69] ಆದರೆ ರಾಕೆಟ್‌ಗಳಿಗೆ ತಗುಲುತ್ತಿದ್ದ ವೆಚ್ಚವು ಅವುಗಳ ಉಪಯೋಗಕ್ಕಿಂತ ತುಂಬಾ ದುಬಾರಿಯಾಗಿರುತ್ತಿತ್ತು.

**ನೌಕಾದಳ**

ಪ್ರಾಚೀನ ಕಾಲದಿಂದಲೂ ನೌಕಾಪಡೆಯು ಅಸ್ತಿತ್ವದಲ್ಲಿತ್ತು. ಮೈಸೂರು ಒಡೆಯರ ಕಾಲದಲ್ಲಿ ಹೈದರಾಲಿಯು ಪ್ರವರ್ಧಮಾನಕ್ಕೆ ಬರುವ ಮುಂಚೆ ನೌಕಾದಳದ ಯಾವುದೇ ಉಲ್ಲೇಖಗಳು ನಮಗೆ ಕಂಡುಬರುವುದಿಲ್ಲ. ಆದರೆ ಮೈಸೂರು ರಾಜ್ಯವು ನೌಕಾದಳದಲ್ಲಿ ಪ್ರಗತಿಯನ್ನು ಸಾಧಿಸಲು ಹೈದರ್ ಅಲಿಯು ಬಹುವಾಗಿ ಶ್ರಮಿಸಿದನು. ಏಕೆಂದರೆ ಯೂರೋಪಿಯನ್ನರಾದ ಬ್ರಿಟಿಷರು ಮತ್ತು ಫ್ರೆಂಚರು ನೌಕಾದಳದಲ್ಲಿ ಪ್ರಬಲರಾಗಿದ್ದರು. ಈತನ ತರುವಾಯ ಆತನ ಮಗನಾದ ಟಿಪ್ಪುಸುಲ್ತಾನನು ನೌಕಾದಳದ ಅಭಿವೃದ್ಧಿಗಾಗಿಯೇ ವಿಶೇಷವಾದ ಒತ್ತನ್ನು ನೀಡಿದನು. ಮರಾಠರಲ್ಲಿ ಶಿವಾಜಿಯ ಕಾಲದಲ್ಲೇ ಕೊಂಕಣದ ಕರಾವಳಿ ತೀರದಲ್ಲಿ ಸಿದ್ಧಿಯರ ನೌಕಾಬಲದ ದಾಳಿಗಳನ್ನು ತಡೆಯಲು ನೌಕಾದಳದ ಅಗತ್ಯತೆಯನ್ನು ಮನಗಂಡನು. ಇವನ ಸೈನ್ಯದಲ್ಲಿ ಮಧ್ಯಮವರ್ಗದ ಮತ್ತು ಸಣ್ಣ ದೋಣಿಗಳಿದ್ದವು.[71] ಇದೇ ಮಾದರಿಯಲ್ಲಿಯೇ ಹೈದರನು ಕೂಡ ನೌಕಾದಳವನ್ನು ಸಂಘಟಿಸಿದನು. ಈತ ಬ್ರಿಟಿಷರೊಂದಿಗೆ ಉಂಟಾದ ವೈಮನಸ್ಸುಗಳಿಂದ ಅವರ ಬೆನ್ನೆಲುಬಾಗಿದ್ದ ಸಮುದ್ರ ವ್ಯಾಪಾರವನ್ನು ಹಾಳುಮಾಡಿ ಅವರನ್ನು ನೌಕಾಯುದ್ಧದಲ್ಲಿ ಸೋಲಿಸುವುದೇ ಅವನ ಪ್ರಮುಖ ಗುರಿಯಾಗಿತ್ತು. ಬ್ರಿಟಿಷರು ನೌಕಾಪಡೆಯಲ್ಲಿ ಶಕ್ತಿಯನ್ನು ಹೊಂದಿದ್ದರಿಂದ ಅವರ ಈ ಶಕ್ತಿಗುಂದಿಸಲು ಹೈದರನು ಹಲವು ಮಾರ್ಗಗಳನ್ನು ಕಂಡುಕೊಂಡನು. ಆ ಪ್ರಕಾರವಾಗಿ 1ನೇ ಆಂಗ್ಲೋ–ಮೈಸೂರು ಯುದ್ಧ ಪ್ರಾರಂಭವಾಗುವ ಮುಂಚೆ ಹೈದರ್ ಮತ್ತು ಮುಂಬೈನ ಇಂಗ್ಲಿಷರ ನಡುವೆ ಒಂದು ಒಪ್ಪಂದ ಏರ್ಪಟ್ಟಿತ್ತು. ಈ ಒಪ್ಪಂದದ ಪ್ರಕಾರ ಇಂಗ್ಲೀಷರ ರಾಯಭಾರಿಯಾದ ಸ್ಟ್ರಾಪ್‌ಗೆ ಹೈದರನು ತನಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವಂತೆ ಶಿಫಾರಸ್ಸು ಮಾಡುವುದು. ಎರಡನೆಯದಾಗಿ ಹೈದರನ ಸಾಮಂತನಾದ ಅಲಿರಜಾನ ಮೇಲೆ ಯುದ್ಧಮಾಡಿ ಹಾಪ್‌ಕಿನ್ಸ್‌ನು ಸೋತು ಒಂದು ಫಿರಂಗಿಯನ್ನು ಕಳೆದುಕೊಳ್ಳಬೇಕಾಯಿತು. ಆಗ ಮಧ್ಯ ಪ್ರವೇಶಿಸಿದ ಹೈದರನು ಆ ಫಿರಂಗಿಯನ್ನು ಹಿಂದಿರುಗಿಸಿ ತನ್ನ ಸದ್ಭಾವನೆಯ ಕುರುಹಾಗಿ ತನ್ನ ಹಡಗನ್ನು ದುರಸ್ತಿಗಾಗಿ ಅವರ ನೌಕಾನೆಲೆಗೆ ಕಳುಹಿಸಿಕೊಟ್ಟನು.[72] ಈ ವೇಳೆಗಾಗಿಯೇ ಹೈದರನ ಸೈನ್ಯದಲ್ಲಿ ಹಡಗುಗಳ ನಿರ್ಮಾಣವು ಪ್ರಾರಂಭವಾಗಿ ಮಲಬಾರ್ ತೀರಪ್ರದೇಶದಲ್ಲಿ ಒಂದು ನೌಕಾನೆಲೆಯನ್ನು ಪ್ರಾರಂಭಿಸಿದನು. ಇದು ಕ್ರಿ.ಶ.1768ರ ವೇಳೆಗೆ ಒಂದು ಪ್ರಬಲವಾದ ನೌಕಾನೆಲೆಯಾಗಿ ರೂಪುಗೊಂಡಿತು. ಆಂಗ್ಲರಿಗೆ ನೌಕಾಬಲವೇ ಭಾರತದ ಭಯ ಮತ್ತು ನಾಶ ಎಂಬುದನ್ನು ಹೈದರನು ಮನಗಂಡಿದ್ದು ದಿಂಡಿಗಲ್ಲಿನ ಫೌಜುದಾರನಾದಾಗಲೇ ನೌಕಾದಳದತ್ತ ತನ್ನ ಗಮನಹರಿಸಿದನು.

ಕ್ರಿ.ಶ.1768ರ ಪ್ರಾರಂಭದಲ್ಲಿ ಮುಂಬಯಿ ಸರ್ಕಾರದ ಅಧೀನದಲ್ಲಿದ್ದ ನೌಕಾದಳದಲ್ಲಿ 400 ಯೂರೋಪಿಯನ್ ಸೈನಿಕರೂ, ಅಸಂಖ್ಯಾತ ಸಾಮಾನ್ಯ ಸ್ಥಳೀಯ ಸಿಪಾಯಿಗಳಿದ್ದರು. ಪಶ್ಚಿಮ ಕರಾವಳಿಯ ಮಲಬಾರ್ ತೀರಪ್ರದೇಶವನ್ನು ಮುತ್ತುವುದೇ ಇದರ ಉದ್ದೇಶ.[73] ಅದರಲ್ಲಿ ಯಶಸ್ವಿಯಾದ ಈ ನೌಕಾದಳ ಮೊದಲು ಹೊನ್ನಾವರದ ಬಳಿ ಕಾಣಿಸಿಕೊಂಡಿತು. ಹೈದರನು ಈ ಮೊದಲೇ ಹೊನ್ನಾವರದ ಬಳಿ ನೌಕೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದನು. ಆದರೆ ಅವನು ನೌಕಾದಳದ ಬಗ್ಗೆ ಜ್ಞಾನವಿಲ್ಲದ ಅಶ್ವದಳದ ಅಧಿಕಾರಿಯಾದ ಲತೀಫ್ ಅಲಿಬೇಗನನ್ನು ನೌಕಾಬಲದ ನಾಯಕನನ್ನಾಗಿ ನೇಮಿಸಿದ್ದೇ ಇದಕ್ಕೆ ಕಾರಣ.[74] ಮುಂಬಯಿಯ ನೌಕಾಬಲವು ಹೊನ್ನಾವರವನ್ನು ಸಮೀಪಿಸಿದ ಕೂಡಲೇ ಎರಡು ನೌಕೆಗಳು ತಕ್ಷಣ ಹಿಡಿದು ಸ್ವಾಧೀನ ಪಡಿಸಿಕೊಳ್ಳುವ ಯಂತ್ರನೌಕೆಗಳು ಎರಡು ಹತ್ತು ದೋಣಿಗಳಿಂದ ಕೂಡಿದ ಹೈದರನ ನೌಕಾದಳ ಹೋಗಿ ಆಂಗ್ಲರನ್ನು ಸೇರಿದವು. ಹೊನ್ನಾವರ, ದುರ್ಗದ್ವೀಪವನ್ನು ವಶಮಾಡಿಕೊಂಡು ಆಂಗ್ಲನೌಕೆಯು ಮಂಗಳೂರಿಗೆ ಹೊರಟು ಹೋಯಿತು. ಆಂಗ್ಲನೊಬ್ಬನನ್ನು ನೌಕಾದಳದ ನಾಯಕನನ್ನಾಗಿ ಹೈದರನು ನೇಮಿಸಿದ್ದರಿಂದ ಆತಮಾಡಿದ ಸ್ವಾಮಿದ್ರೋಹಕ್ಕೆ ಮೈಸೂರಿನ ನೌಕಾದಳವು ಆಂಗ್ಲರ ಕೈವಶವಾಯಿತು.[75] ಈ ಘಟನೆಯಿಂದ ಮೈಸೂರು ರಾಜ್ಯಕ್ಕೊಂದು ನೌಕಾನೆಲೆಯಿದ್ದು ಹೊನ್ನಾವರ ಮತ್ತು ಮಂಗಳೂರಿನ ಬಂದರುಗಳು ಪ್ರಸಿದ್ಧ ಮತ್ತು ಪ್ರಬಲವಾಗಿದ್ದವು ಎಂದು ನಮಗೆ ತಿಳಿದುಬರುತ್ತವೆ.

ಹೈದರಾಲಿಯನ್ನು ಕುರಿತು ಪೋರ್ಚುಗೀಸನೊಬ್ಬ ಕ್ರಿ.ಶ.1765ರಲ್ಲಿ ಸಂಕ್ಷಿಪ್ತವಾಗಿ ಪತ್ರವನ್ನು ಬರೆದು ಲಿಸ್ಬನನ್ನಿಗೆ ಕಳುಹಿಸಿದ. ಆತನ ಹೇಳಿಕೆಯು ಈ ಮುಂದಿನಂತಿದೆ. 'ಹೈದರ್ ಅಲಿ ಮತ್ತು ಮರಾಠರು ನಮ್ಮ ನೆರೆಹೊರೆಯವರು. ಹೈದರನು ತನ್ನ ನೌಕಾಬಲವನ್ನು ವೃದ್ಧಿಸಿಕೊಳ್ಳಲು ಸಮರ್ಥನೂ ಸ್ವತಂತ್ರನಾಗಿದ್ದಾನೆ. ಈಗಾಗಲೇ ಅವನ ನೌಕಾಬಲವು ನಮಗೆ ತಲೆನೋವು ಹಿಡಿಸಿದೆ. ನಾವೀಗ ಅವನೊಬ್ಬ ಸಾಗರಚೋರನೆಂದು ಹೆದರಿದರೆ ಮುಂದಿನ ಕಾಲ ಮತ್ತು ಅದೃಷ್ಟ ಅವನನ್ನು ಮತ್ತಷ್ಟೂ ಪ್ರಬಲನನ್ನಾಗಿಸುತ್ತಿದ್ದು ನಾವು ನಾಶವಾಗಬಹುದು. ಅವನ ನೌಕಾಬಲದಲ್ಲಿ ಈಗ ನಮಗೆ ಗೊತ್ತಿರುವ ಹಾಗೆ 30 ಯುದ್ಧನೌಕೆಗಳಿವೆ. ಅಲ್ಲದೆ ಸರಕು ಸಾಗಾಣಿಕೆಗೆ ಅನೇಕ ಹಡಗುಗಳಿವೆ. ಈ ನೌಕಾದಳದ ನಾಯಕನೊಬ್ಬ ಆಂಗ್ಲನಾಗಿದ್ದು ಈತ ಹೊನ್ನಾವರದ ಸ್ವಾಮಿದ್ರೋಹಿ.[76] ಈ ಹೇಳಿಕೆಯನ್ನು ಗಮನಿಸಿದಾಗ ಹೈದರನು ಭೂಬಲ ಮತ್ತೆ ನೌಕಾಬಲಗಳಲ್ಲಿ ಸಮರ್ಥವಾದ ಜ್ಞಾನವುಳ್ಳಂತಹ ವ್ಯಕ್ತಿಯಾಗಿದ್ದನು.

ಈ ವೇಳೆಗಾಗಲೇ ಮತ್ತೊಬ್ಬ ಫ್ರೆಂಚ್ ವ್ಯಕ್ತಿಯಾದ ಜೋಸ್ ಪಿಡ್ರೋ–ಡ–ಕೆಮರಾ ಎಂಬಾತನು ಕಾಸ್ಟ್ರೋ ಎಂಬುವನಿಗೆ ಬರೆದ ಪತ್ರವು ಬಹಳ ಕುತೂಹಲಕಾರಿಯಾಗಿದ್ದು ಹೈದರನ ನೌಕಾನೆಲೆ ಮತ್ತು ನಾಕೆಗಳ ನಿರ್ಮಾಣದ ಬಗ್ಗೆ ಮಾಹಿತಿಯನ್ನು

ನೀಡುತ್ತದೆ. ಆ ಪತ್ರದ ಸಾರಾಂಶ ಈ ರೀತಿಯಾಗಿದೆ. ಹೈದರನು ಭೂಬಲದಲ್ಲಿ ಪ್ರಚಂಡನಾಗಿದ್ದು ನೌಕಾಬಲದಲ್ಲೂ ತಾನು ಅಷ್ಟೇ ಪರಾಕ್ರಮಿಯಾಗಬೇಕೆಂದು ಆಸೆಯನ್ನು ಹೊಂದಿದ್ದು ತನ್ನ ಉದ್ದೇಶ ಸಾಧನೆಗಾಗಿ ಹಡಗುಗಳನ್ನು ನಿರ್ಮಿಸಲು ಆದೇಶ ಹೊರಡಿಸಿದ್ದಾನೆ. ಈಗಾಗಲೇ ಅವನು ತ್ರಿಪಟ ಸ್ಥಂಭಗಳ ಎಂಟು ಹಡಗುಗಳನ್ನು ಸಮುದ್ರದ ಮೇಲೆ ಬಿಟ್ಟಿದ್ದು ಈ ಹಡಗುಗಳಲ್ಲಿ ಒಂದೊಂದರಲ್ಲೂ 28ರಿಂದ 40ರವರೆಗೆ ಫಿರಂಗಿಗಳನ್ನು ಕಟ್ಟಬಹುದು. ಕಡಿಮೆ ಭಾರದ ಮತ್ತು ಅತಿ ಶೀಘ್ರವಾಗಿ ಕಾರ್ಯಮುಗಿಸಲು ಅನುಕೂಲವಾದ ಸಣ್ಣಸಣ್ಣ ಹಡಗುಗಳೂ ಅಷ್ಟೇ ಇವೆ. ನೌಕಾ ನಿರ್ಮಾಣಕ್ಕೆ ಪ್ರಯತ್ನಗಳಾಗುತ್ತಿವೆ. ಸ್ಥಳಾನುಕೂಲಕ್ಕೆ ಮಾತ್ರವಲ್ಲ, ನೌಕಾದಳ ಸಂರಕ್ಷಣೆಗಾಗಿಯೇ, ಏಷಿಯಾದಲ್ಲೇ ಬಲಯುತವಾದ ನೌಕಾದಳದ ನಿರ್ಮಾಣವಾಗುತ್ತಿದೆ. ಈ ತಿಂಗಳಿನಲ್ಲೇ ಭಟ್ಕಳ ಕೊಲ್ಲಿಯ ಬಳಿ ನೀರುಮಟ್ಟದ ಮೇಲೆ ಭಾರಿ ದಸಿಗಳನ್ನು, ಕೋವಿಗೆ ಕಂಟಗಳನ್ನಿಟ್ಟು, ಪಕ್ಕಪಕ್ಕದಲ್ಲಿ ಆಳವಾಗಿ ಹೂತು, ನಿರ್ಮಿಸಿದ ಕಾಪಿನ ಗೋಡೆಯ ನಿರ್ಮಾಣವನ್ನು ಆರಂಭಿಸಿದ್ದಾನೆ. ಅಂಗವ ದ್ವೀಪದ ಬಳಿ, ದಕ್ಷಿಣ ದಿಕ್ಕಿನ ಕಡೆ ಈ ಕಾಪುಗೋಡೆ, ಕೃತಕ ಬಂದರೊಂದನ್ನು ಕಟ್ಟಬೇಕು. ಅದರಲ್ಲಿ ಸಾಗರದುಬ್ಬರದ ಸಮಯದಲ್ಲಿ ಸಹ ದೊಡ್ಡ ದೊಡ್ಡ ಹಡಗುಗಳನ್ನಿಟ್ಟು ಕಾಪಾಡಬೇಕೆಂಬುದು ಅವನ ಉದ್ದೇಶ. ಬಂದರಿನ ರಕ್ಷಣೆಗಾಗಿ ದುರ್ಗನಿರ್ಮಾಣದ ಕಾರ್ಯವೂ ಸೇರಿದ್ದು ದ್ವೀಪದ ರೂಪುರೇಷೆಗಳಿಗೆ ಅನುಸಾರವಾಗಿ ಈಗ ನಕ್ಷೆ ಸಿದ್ಧವಾಗುತ್ತಿದೆ. ಆ ದುರ್ಗದ ಪ್ರಕಾರವು ವಿಸ್ತಾರವಾಗಿದ್ದ ಒಂದು ಪಟ್ಟಣವೇ ಅದರಲ್ಲಿ ಅಡಗುವಂತಿದೆ. ಅದರಲ್ಲಿ ನಾನಾ ಜನಾಂಗಗಳ ನಿರೀಕ್ಷಿತ ವರ್ತಕ ವ್ಯಾಪಾರಿಗಳ ವಾಸಕ್ಕಾಗಿ ಭವನಗಳು ನಿರ್ಮಾಣವಾದಂತಿದೆ. ಅವರನ್ನು ಆಕರ್ಷಿಸಲು ಸಮೀಪದಲ್ಲೇ ಅನುಕೂಲವಾದ ನಿವೇಶನಗಳನ್ನು ದಾನವಾಗಿ ಕೊಡಲಾಗುತ್ತದೆ. ಅವರ ಬಂಡವಾಳಕ್ಕೆ ಸಾಲ ನೀಡಲಾಗುವುದು. ಅವರು ಅಲ್ಲಿ ಮಳಿಗೆಗಳನ್ನು ಕಟ್ಟಿಕೊಂಡು ತಮ್ಮ ವಸ್ತುಗಳನ್ನು ಭದ್ರಪಡಿಸಿಕೊಳ್ಳಬಹುದು. ದೊಡ್ಡ ನೌಕಾದಳಕ್ಕೆ ಅಗತ್ಯವಾದ ಮದ್ದುಗುಂಡುಗಳ ಸಂಗ್ರಹಾಲಯವನ್ನೇ ನಿರ್ಮಿಸಿದ್ದು, ಮದ್ದು ಗುಂಡುಗಳನ್ನು ತಯಾರಿಸಲು ಕಾರ್ಖಾನೆಗಳ ಸ್ಥಾಪನೆಯಾಗುತ್ತಿದೆ. ಇವುಗಳೆಲ್ಲವನ್ನು ಕುರಿತು ಚೆನ್ನಾಗಿ ಆಲೋಚನೆ ಮಾಡಿ ಯೋಜನೆಯನ್ನು ಸಿದ್ಧಗೊಳಿಸಲಾಗಿದೆ. ಮೂರು ವರ್ಷಗಳಲ್ಲಿ ಈ ಕೆಲಸವನ್ನು ಮುಗಿಸಲು ನಿಶ್ಚಯವಾಗಿತ್ತು. ಡಚ್‌ನ ನಿಪುಣ ಇಂಜಿನಿಯರ್ ಆದ ಜೋಸ್ ಅಜೆಲರ್ಸ್ ಇದರ ಮುಖ್ಯರುವಾರಿ. ಆದರೆ ಅವನ ಸಹಾಯಕ್ಕೆ ಬುದ್ಧಿವಂತರಾದ ಕೆಲಸಗಾರರಿಲ್ಲದೆ ಕೆಲಸ ತಡವಾಯಿತಾದರೂ ಹೈದರನ ನೌಕಾಬಲವು ಏರುಗತಿಯಲ್ಲಿ ಸಾಗಿದೆ'[77] ಎಂದು ಹೇಳಿದ್ದಾನೆ.

ಟಿಪ್ಪು ಸುಲ್ತಾನನು ತನ್ನ ಕಾಲದಲ್ಲಿ ಹಡಗುಗಳು ಮತ್ತು ಯುದ್ಧ ನೌಕೆಗಳ ನಿರ್ಮಾಣಕ್ಕೆ ಒತ್ತುನೀಡಿದನು. ನೌಕಾಪಡೆಯಿಂದ ಕಡಲ ಯುದ್ಧದಲ್ಲೂ ಬ್ರಿಟಿಷರನ್ನು ಸೋಲಿಸುವುದೇ ಇವನ ಪ್ರಮುಖ ಗುರಿಯಾಗಿತ್ತು. ಮಂಗಳೂರು, ಸದಾಶಿವಗಡ ಮತ್ತು ಬಾಸ್ಕೋರಾಜಿ ಎಂಬ ಸ್ಥಳಗಳಲ್ಲಿ ಹಡಗು ನಿರ್ಮಾಣ ಕೇಂದ್ರಗಳಿದ್ದವು. ಟಿಪ್ಪು ನೌಕಾಪಡೆಯ ಅಧಿಕಾರಿಗಳು ಮತ್ತು ಸೈನಿಕರಿಗೆ ತರಬೇತಿ ನೀಡುವ ಕಾರ್ಯವನ್ನು ಮಾಡಿ ಕ್ರಿ.ಶ. 1793ರಲ್ಲಿ 100 ಹಡಗುಗಳನ್ನು ನಿರ್ಮಿಸಲು ಆದೇಶಿಸಿ ಅವುಗಳ ನಿರ್ಮಾಣಕ್ಕೆ ಸ್ಥಳೀಯವಾಗಿ ಮೂಲವಸ್ತುಗಳನ್ನು ಖರೀದಿಸಲು ಆದೇಶವಿತ್ತನು. ಈ ಹಡಗುಗಳು ಯುದ್ಧ, ಸಾರಿಗೆ ಮತ್ತು ಸರಕುಗಳನ್ನು ಸಾಗಿಸಲು ದೃಢವಾಗಿದ್ದವೆಂದು ಕಿರ್ಕ್ ಪ್ಯಾಟ್ರಿಕ್ ಒಪ್ಪಿಕೊಂಡಿದ್ದು ಯೂರೋಪಿಯನ್ ಮಾದರಿಯ ನೌಕಾಪಡೆಯ ರಚನೆಗೆ ಹೆಚ್ಚು ಒತ್ತುನೀಡಿದನು[78] ಎಂದು ತಿಳಿಸಿದ್ದಾನೆ.

ಟಿಪ್ಪು ನೌಕಾದಳದ ರಚನೆ, ಬಲವರ್ಧನೆ ಮತ್ತು ಸಂಘಟನೆಯ ಮಹತ್ವವನ್ನು ಅರಿತಿದ್ದನು. ಉತ್ತಮವಾದ ನೌಕಾದಳಿತವನ್ನು ರೂಪುಗೊಳಿಸಿದ್ದನು. ಒಂದು ಪ್ರತ್ಯೇಕವಾದ ನೌಕಾದಳವನ್ನು ರಚಿಸಿ 1,000 ಜನ ಸೇವೆಸಲ್ಲಿಸುವಂತೆ ಮಾಡಿದ್ದನು. ಟಿಪ್ಪುವಿನ ರಾಜ್ಯದಲ್ಲಿ ಸುಮಾರು 40 ಯುದ್ಧ ನೌಕೆಗಳಿದ್ದು ಅವುಗಳು ಕಲ್ಲಿಕೋಟೆ, ಸದಾಶಿವಗಢ ಮತ್ತು ಮಂಗಳೂರಿನಲ್ಲಿದ್ದವು.[79] ಅವುಗಳನ್ನು ಸರ್ವವಿಧದಲ್ಲೂ ಸಜ್ಜುಗೊಳಿಸಿದ್ದನು. ಬ್ರಿಟಿಷರ ನೌಕಾದಳದ ಅಧ್ಯಯನಕ್ಕೆ ತನ್ನ ಅಧಿಕಾರಿಗಳನ್ನು ಮದ್ರಾಸಿಗೆ ಕಳುಹಿಸಿದ್ದನು. ನೌಕಾನೆಲೆಯ ಮುಖ್ಯಸ್ಥನನ್ನು 'ಮೀರ್ ಎಯಾಮ್ಸ್' ಎಂದು ಕರೆಯುತ್ತಿದ್ದರು. ಅವರು ಯುದ್ಧಕ್ಕೆ ಹೋಗುವಂತಿರಲಿಲ್ಲ. ಇವರ ಅಧೀನ ಅಧಿಕಾರಿಗಳಾಗಿ ಮೀರ್‌ಭಕ್ಷಿಗಳಿದ್ದರು. ಇವರು ಮುವ್ವತ್ತು ಮಂದಿಯಿದ್ದು ಅದರಲ್ಲಿ ಇಪ್ಪತ್ತು ಮಂದಿ ನೌಕಾಯಾನಕ್ಕೆ ತೆರಳಿದರೆ ಉಳಿದ 10 ಮಂದಿ ತೋರುಗಾಣಿಕೆಗೆ ನೌಕಾನೆಲೆಯಲ್ಲೇ ಇರಬೇಕಿತ್ತು.[80] ಟಿಪ್ಪು ನೌಕಾಪಡೆಯ ಮುಖ್ಯಸ್ಥನಾದ ಮೀರ್ ಎಯಾಮ್ಸ್‌ಗೆ ಕೆಲವು ನಿರ್ದೇಶನಗಳನ್ನು ನೀಡಿದ್ದನು. ಅವುಗಳನ್ನು ಈ ಕೆಳಗಿನಂತೆ ತಿಳಿಸಬಹುದಾಗಿದೆ.

1. ಯುದ್ಧಕ್ಕಾಗಿ 100 ಹಡಗುಗಳನ್ನು ಕಟ್ಟಬೇಕು. 10 ನೌಕೆಗಳನ್ನು ಪೂರ್ಣವಾಗಿ ಮಾನವರಿಂದಲೇ ನಡೆಸಬೇಕಿದ್ದು ಪೂರ್ಣಯುದ್ಧ ಸಾಮಾಗ್ರಿಗಳನ್ನಿಡಲು ಅವಕಾಶವಿರಬೇಕು.

2. ಇದಕ್ಕೆ ತಕ್ಕಂತೆ ಅನುಭವಿ ಕೆಲಸಗಾರರನ್ನು ಅವರೇ ವಹಿಸಿಕೊಂಡು ನೇಮಿಸಿಕೊಳ್ಳತಕ್ಕದ್ದು. ಈ ಕೆಲಸಗಾರರಿಗೆ ನೌಕಾಬಲದ ತರಬೇತಿಯಾಗಿದ್ದು ವ್ಯಾಪಾರ, ವಾಣಿಜ್ಯದ ಅನುಭವವೂ ಇರಬೇಕು.

3. ಹಣಕ್ಕಾಗಿ ಮಾರುಕಟ್ಟೆಯಲ್ಲಿ ಯುದ್ಧಸಾಮಗ್ರಿಗಳು ಮುಂತಾದ ಅಗತ್ಯ ವಸ್ತುಗಳು ಲಭ್ಯವಿರದಿದ್ದರೆ ಅದನ್ನು ಸುಲ್ತಾನನ ಗಮನಕ್ಕೆ ತರುವುದು.

ಕ್ರಿ.ಶ.1796ರ ಸೆಪ್ಟಂಬರ್‌ನಲ್ಲಿ ನೌಕಾಬಲದ ಅಧಿಕಾರಿಗಳ ಪುನರ್ ಸಂಘಟನೆಗೆ ಆದೇಶ ನೀಡಲಾಯಿತು. ಅದೇ ವರ್ಷ ಟಿಪ್ಪುವಿನ ನೌಕಾಬಲದ ಕಾರ್ಯಕ್ರಮವು 40 ಹಡಗುಗಳಿಗೆ ಸೀಮಿತವಾಯಿತು. ಅದು ಮೂರು ವಿಭಾಗಗಳಿಗೆ ಹಂಚಿಹೋಯಿತು. ಮಂಗಳೂರು ನೌಕಾ ವಿಭಾಗಕ್ಕೆ 12, ವಾಜಿದಾಬಾದ್‌ಗೆ 14, ಮುಜಿದಾಬಾದ್‌ಗೆ 14 ನೌಕೆಗಳು ನೀಡಲ್ಪಟ್ಟವು. ಇವೆಲ್ಲವೂ ನೌಕಾಪಡೆಯ ಮುಖ್ಯಸ್ಥನ ನೇತೃತ್ವದಲ್ಲಿ ಮಂಗಳೂರಿನಲ್ಲಿ ಲಂಗರು ಹಾಕಬೇಕೆಂದು ಆದೇಶಿಸಿದನು. ಇದರಲ್ಲಿ 30 ಸಮರ ನೌಕೆಗಳಿದ್ದು ಅವುಗಳಲ್ಲಿ 30 ಫ್ರಿಗೇಟ್ ಆಗಿರಬೇಕು. ಜೊತೆಗೆ 10 ನೌಕೆಗಳಲ್ಲಿ 70 ಬಂದೂಕುಗಳು 10 ನೌಕೆಗಳಲ್ಲಿ 6ಕ್ಕೆ ಬಂದೂಕು ನೀಡಬೇಕು. ಫ್ರಿಗೇಟ್‌ನಲ್ಲಿ 180 ಜನರಿದ್ದ ಪ್ರತಿ ನೌಕೆಯಲ್ಲೂ ಗನ್‌ಮ್ಯಾನ್‌ಗಳು ಮಸ್ಕೆಟೆರ್‌ಗಳು, ಟೆಂಪಾಡರ್ಸ್ ಸರ್ದಾರ್‌ಗಳು, ಪೈಲೆಟ್‌ಗಳು, ಸರ್ಜನ್‌ಗಳು ಸಹಾಯಕರು ಇರತಕ್ಕದ್ದು, ಪ್ರತಿ ತಿಂಗಳಿಗೆ ಇವರಿಗೆ 1695 ಪಗೋಡಗಳನ್ನು ಖರ್ಚು ಮಾಡಬೇಕು ವಾರ್ಷಿಕವಾಗಿ ಈ ಎಲ್ಲಾ ಫ್ರಿಗೇಡ್‌ಗಳು 9 ನೌಕೆಗಳ ಖರ್ಚು 1,82,400 ಪೌಂಡ್ ಸ್ಟರ್ಲಿಂಗ್ ಎಂದು ಲೆಕ್ಕಹಾಕಲಾಯಿತು.[81] ಟಿಪ್ಪುವು ತನ್ನ ಸೈನಿಕರಲ್ಲಿ ಶಿಸ್ತು, ಸಂಯಮ ಮತ್ತು ಸಂಘಟನೆಯೊಂದಿಗೆ ದೇಶಪ್ರೇಮವನ್ನು ತುಂಬಲು ಪ್ರಯತ್ನಿಸಿದನು. ಅವರ ವೇತನ ಹಾಗೂ ಸಾರಿಗೆಗಳನ್ನು ಉತ್ತಮಪಡಿಸಿ ಅವರ ಪತ್ನಿಯರಿಗೆ ಸಹಾಯಕವಾಗುವಂತೆ ಹಲವಾರು ಸೌಲಭ್ಯಗಳನ್ನು ನೀಡಲಾಯಿತು. ಅವುಗಳಲ್ಲಿ ಯುದ್ಧದಲ್ಲಿ ಸಾಹಸದಿಂದ ಹೋರಾಡಿದವರಿಗೆ ಬಿರುದು ಬಾವಲಿಗಳು ಮತ್ತು ಪಾರಿತೋಷಕಗಳ ಜೊತೆಗೆ ಉನ್ನತ ಹುದ್ದೆಗಳನ್ನು ನೀಡಿ, ಅವರಲ್ಲಿ ಸ್ವಾಮಿನಿಷ್ಠೆ ಮತ್ತು ರಾಷ್ಟ್ರಾಭಿಮಾವನ್ನು ಹೆಚ್ಚಿಸಲು ಒಂದು ಖಾಸಗಿದಳವನ್ನು ನಿರ್ಮಿಸಿದನು. ಅವರು ಇತರರಿಗಿಂತ ಮೇಲ್ಪಂಕ್ತಿಯಾಗಿದ್ದು ಕುರ್ಬೇಲು ಎಂದು ತದನಂತರ ಜುಮ್ರಾ[82] ಎಂದು ಕರೆಯಲ್ಪಡುತ್ತಿದ್ದರು.

**ಇತರೆ : ಒಂಟೆ ಮತ್ತು ಎತ್ತುಗಳು**

ಮೈಸೂರು ಒಡೆಯರ ಪ್ರಾರಂಭದ ಆಳ್ವಿಕೆಯಿಂದ ರಾಜಒಡೆಯರ ಕಾಲದವರೆಗೆ ಒಂಟೆಗಳ ಉಲ್ಲೇಖವು ನಮಗೆ ದೊರೆಯುವುದಿಲ್ಲ. ನಂತರದ ಕಾಲಾವಧಿಯಲ್ಲಿ ಮೈಸೂರಿನ ಸೈನ್ಯದಲ್ಲಿ ಅಪಾರವಾದ ಕಾಲ್ದಳ, ಅಶ್ವದಳವಿದ್ದರೂ ಪ್ರಾರಂಭದಲ್ಲಿ ಒಂಟೆಗಳನ್ನು ಏಕೆ ನಿರ್ಲಕ್ಷಿಸಿದ್ದರು? ಎಂದು ತಿಳಿದುಬರುವುದಿಲ್ಲ. ನೇರ ಹೋರಾಟದಲ್ಲಿ ಭಾಗಿಯಾಗದೆ ಯುದ್ಧದ ಅವಶ್ಯಕವಾದ ಯುದ್ಧ ಸಾಮಾಗ್ರಿಗಳು ಆಹಾರವಸ್ತುಗಳು ಮತ್ತು ಶಿಬಿರಕ್ಕೆ ಅಗತ್ಯವಾದ ವಸ್ತುಗಳನ್ನು ಪೂರೈಸಲು ಒಂಟೆಗಳು ಮತ್ತು ಎತ್ತುಗಳು ಅಗತ್ಯವಾಗಿದ್ದವು. ಆದ್ದರಿಂದ ಇವುಗಳನ್ನು ಪೋಷಕ ಅಥವಾ ಸಹಾಯಕ ಸೈನ್ಯವೆಂದೂ ಕರೆಯಲಾಗುತ್ತದೆ.[83]

ಮೈಸೂರು ರಾಜ್ಯದಲ್ಲಿ ಕ್ರಿ.ಶ.1638ರಲ್ಲಿ ಕಂಠೀರವ ನರಸರಾಜ ಒಡೆಯರು ಅಧಿಕಾರಕ್ಕೆ ಬಂದ ನಂತರ ಒಂಟೆಗಳ ಬಗ್ಗೆ ಮಾಹಿತಿಗಳು ದೊರೆಯುತ್ತವೆ. ಬಿಜಾಪುರದ ಸೈನ್ಯವು ರಣದುಲ್ಲಾಖಾನನ ನೇತೃತ್ವದಲ್ಲಿ (ಕ್ರಿ.ಶ.1638) ನಾಗಮಂಗಲದ ಚೆನ್ನಯ್ಯನೊಡನೆ ಶ್ರೀರಂಗಪಟ್ಟಣದ ಕೋಟೆಗೆ ಮುತ್ತಿಗೆ ಹಾಕಿ ಆಗ್ನೇಯ ಮತ್ತು ಈಶಾನ್ಯ ಪಾರ್ಶ್ವಗಳಲ್ಲಿ ಸುರಂಗ ತೋಡಿ ಮದ್ದುಗುಂಡುಗಳನ್ನಿಟ್ಟು ಸ್ಫೋಟಿಸಿ ಕೋಟೆಯ ಲಗ್ಗೆಯೇರುವಾಗ; ಮೈಸೂರಿನ ಸೈನಿಕರು ಬಿಜಾಪುರದ ಸೈನ್ಯದಲ್ಲಿದ್ದ ಆನೆ, ಕುದುರೆ, ಒಂಟೆದಳಗಳನ್ನು ಹಿಮ್ಮೆಟ್ಟಿಸಿ ಸೋಲಿಸಿದರು. ಈ ಯುದ್ಧದ ತರುವಾಯ ಕಂಠೀರವ ನರಸರಾಜ ಒಡೆಯರು ತಮ್ಮ ಸೈನ್ಯದಲ್ಲಿದ್ದ ಆನೆ, ಒಂಟೆ, ಕುದುರೆ, ಎತ್ತು ಮತ್ತು ಕತ್ತೆಗಳಿಗೆ ಹುಲ್ಲು ಮೆದೆಗಳನ್ನು ಹಾಕಿಸಿದರು.[85] ಚಿಕ್ಕದೇವರಾಜ ಒಡೆಯರು ತಮ್ಮ ಕಾಲದಲ್ಲಿ ಆನೆ, ಕುದುರೆಗಳ ಲಾಯಗಳ ಜೊತೆ ಒಂಟೆಲಾಯವನ್ನು ಸಹ ನಿರ್ಮಿಸಿದರು.[86]

ಮೈಸೂರಿನ ದಳವಾಯಿಯಾದ ನಂಜರಾಜಯ್ಯನ ನೇತೃತ್ವದ ಸೈನ್ಯದಲ್ಲಿ ಹೈದರನು ನಿಯುಕ್ತನಾದಾಗ ಆರ್ಕಾಟಿಗೆ ಮುತ್ತಿಗೆಹಾಕಿ ನಾಸರಜಂಗನನ್ನು ಕೊಂದು ಅವನ ಸೈನ್ಯದಲ್ಲಿದ್ದ 15 ಒಂಟೆಗಳನ್ನು ವಶಪಡಿಸಿಕೊಂಡು ಅಪಾರವಾದ ಸಂಪತ್ತನ್ನು ಆ ಒಂಟೆಗಳ ಮೇಲೆ ಹೇರಿಕೊಂಡು ಬಂದನು.[87] ಹೈದರನು ಸೈನ್ಯದ ವೇಗವನ್ನು ಹೆಚ್ಚಿಸಲು ಅಶ್ವದಳವನ್ನು ಬಳಸಿದ್ದರಿಂದ ಒಂಟೆದಳವನ್ನು ನಿರ್ಲಕ್ಷಿಸದೆ ಅವುಗಳನ್ನು ಕಡಿಮೆ ಸಂಖ್ಯೆಯಲ್ಲಿ ಬಳಸಿದನು. ಕ್ರಿ.ಶ. 1780ರಲ್ಲಿ ಶ್ರೀರಂಗಪಟ್ಟಣದಲ್ಲಿ 6,000 ಒಂಟೆಗಳಿದ್ದರೆ[88] ಕ್ರಿ.ಶ.1790ರ ವೇಳೆಗೆ ಬೋಸಲೆ ಮತ್ತು ನಿಜಾಮನನ್ನು ಸೋಲಿಸಿ ಅವನಿಂದ 2,000 ಒಂಟೆಗಳನ್ನೂ ತನ್ನ ಸೈನ್ಯಕ್ಕೆ ಸೇರಿಸಿಕೊಳ್ಳಲಾಯಿತು.

ಮೈಸೂರಿನ ಸೈನ್ಯದಲ್ಲಿ ಬಂಡಿಗಳು ಮತ್ತು ಫಿರಂಗಿಗಳನ್ನು ಎಳೆಯಲು ಯಥೇಚ್ಛವಾಗಿ ಎತ್ತುಗಳನ್ನು ಬಳಸಲಾಗುತ್ತಿತ್ತು. ವಿಜಯನಗರಕ್ಕೆ ಹೊರಗಡೆಯಿಂದ ಪ್ರತಿದಿನ ನೂರಾರು ಹೇರೆತ್ತುಗಳು ಬರುತ್ತಿದ್ದ ಮಾಹಿತಿಯನ್ನು ಡೊಮಿಂಗೋ ಪಾಯೆಸ್‌ನು

ತನ್ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸುತ್ತಾನೆ. ರಾಮರಾಜನ ಬಖೈರು ತಿಳಿಸುವಂತೆ ಕ್ರಿ.ಶ.1565ರ ಯುದ್ಧದಲ್ಲಿ ಒಂಟೆ, ಎತ್ತು, ಕತ್ತೆಗಳು, ಸೇನಾ ಶಿಬಿರದ ವಸ್ತುಗಳು, ಶಸ್ತ್ರಾಸ್ತ್ರ ಪರಿಕರಗಳು, ಆಹಾರ ಪದಾರ್ಥಗಳನ್ನು ಸಾಗಿಸಲು ಬಳಸಿದ ಪೋಷಕ ಸೈನ್ಯವಾಗಿತ್ತು ಎಂದು ತಿಳಿಸಲಾಗಿದೆ.

ಕಂಠೀರವ ನರಸರಾಜ ಒಡೆಯರ ಆಳ್ವಿಕೆಯಲ್ಲಿ ಬಿಜಾಪುರದ ರಣದುಲ್ಲಾಖಾನನು ಮಾಡಿದ ಶ್ರೀರಂಗಪಟ್ಟಣದ ಮೇಲಿನ ದಾಳಿಯಲ್ಲಿ ಎತ್ತುಗಳನ್ನು ಕುರಿತು ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯಂ ಮತ್ತು ಲಿಂಗಣ್ಣ ಕವಿಯ ಕೆಳದಿ ನೃಪವಿಜಯ ಎಂಬ ಸಮಕಾಲೀನ ಕೃತಿಗಳು ಮಾಹಿತಿಯನ್ನು ಒದಗಿಸುತ್ತವೆ. ಆ ಪ್ರಕಾರವಾಗಿ ಹೂಡಿದ ಬಂಡಿಗಳೊಳಗೆ ಫಿರಂಗಿಗಳು ಅಗಣಿತವಾಗಿದ್ದವು. ಸರಳು ತುಂಬಿದ ತರಕಸ ಸಿಂಗಾಡಿಗಳು, ಸಾಸಿರ ಬಂಡಿಗಳಲ್ಲಿ ಕರಿಯ ಮದ್ದಿನ ತಿತ್ತಿಬಾಣದ ಹೇರುಗಳಿರದ ಪೀನಿಯ ಸಾಲಮೊಟ್ಟ ಹೇಸರಗತ್ತೆಯ ಮೇಲೆ ಬಂಗಿಯ ಹೇರು ಸಾಸಿರ[89] ಎಂದು ಯುದ್ಧಕ್ಕೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಹೊರುವಂತಹ ಭಾರವಾಹಕಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಚಿಕ್ಕದೇವರಾಜ ಒಡೆಯರ ಆಡಳಿತದ ಅವಧಿಯಲ್ಲಿ ಜಯಾಜಿಘಾಟ್ ಮತ್ತು ನಿಂಬಾಜಿಘಾಟ್ ಎಂಬ ಇಬ್ಬರು ಮರಾಠ ಸರದಾರರ ನೇತೃತ್ವದಲ್ಲಿ ಮೈಸೂರಿನ ಮೇಲೆ ಆಕ್ರಮಣ ಮಾಡಲು ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಕೆಲಸಗೆರೆ, ಕೊತ್ತತ್ತಿ ಗ್ರಾಮಗಳ ಬಳಿ ಬೀಡುಬಿಟ್ಟಿದ್ದರು. ಚಿಕ್ಕದೇವರಾಜ ಒಡೆಯರು ದಳವಾಯಿ ಕುಮಾರಯ್ಯನ ಮಗ ದೊಡ್ಡಯ್ಯನನ್ನು ಕರೆದು ಕೆಲಸಗೆರೆ ಮತ್ತು ಕೊತ್ತತ್ತಿ ಗ್ರಾಮಗಳ ಬಳಿಯಿರುವ ಮರಾಠರ ದಂಡಿನ ಬಳಿಗೆ ನೀವು ಸೈನ್ಯದ ಸಮೇತ ಹೋಗಿ ರಾತ್ರಿ ವೇಳೆಯಲ್ಲಿ ನಮ್ಮ ಸೈನ್ಯದಲ್ಲಿರುವ ಎರಡು–ಮೂರುಸಾವಿರ ಆವಿನದನದ ಎತ್ತುಗಳ ಕೊಂಬುಗಳಿಗೆ ಹಾನಿಕಾರಕವಲ್ಲದಂತೆ ಪಂಜುಗಳನ್ನು ಕಟ್ಟಿ ಬಹಳ ಬೆಳಕಿನಿಂದ ಅವರು ಭೀತರಾಗಿ ದಿಕ್ಕುಗಳ ಕಾಣದೆ ಭ್ರಾಂತರಾಗಿ ಬೆಳಕಿನ ಎದುರಿಗೆ ಬರುವಂತೆ ಎತ್ತುಗಳನ್ನು ಮೂರು ಕಡೆಯಿಂದಲೂ ಚದುರಿಸಿ ಬಿಟ್ಟು, ನೀವು ಸೈನ್ಯಸಮೇತ ಹಿಂದುಗಡೆಯಿಂದ ಯುದ್ಧಸನ್ನದರಾಗಿ ಬರುವುದು. ಅಷ್ಟರಲ್ಲಿ ನಿಮಗೆ ಸಹಾಯಕವಾಗಿ ಶ್ರೀರಂಗಪಟ್ಟಣದಿಂದ ಸೇನೆಯು ಬಂದು ನಿಮ್ಮನ್ನು ಕೂಡುವುದು ಎಂದು ಆಜ್ಞೆಮಾಡಿ ಕಳುಹಿಸಿದರು. ದೊಡ್ಡಯ್ಯನು ಅರಸರು ಹೇಳಿದ ಹಾಗೆಯೇ ಮಾಡಿ ಮರಾಠರ ಸೈನ್ಯದ ಮೇಲೆ ಬಿದ್ದು ಮರಾಠರನ್ನು ಸೋಲಿಸಿದನು.[90] ಹೇಸರಗತ್ತೆಗಳು ಸಹ ಅಂದಿನ ಸೈನ್ಯದ ಅವಶ್ಯಕ ಭಾಗವಾಗಿದ್ದವು. ಹೈದರನ ಕಾಲದಲ್ಲಿ ಟಿಪ್ಪುಸುಲ್ತಾನನು ಮರಾಠರಿಂದ ಸು. 100 ಒಂಟೆ ಮತ್ತು 50 ಹೇಸರಗತ್ತೆಗಳ ಮೇಲಿದ್ದ ಅಪಾರ ಸಂಪತ್ತನ್ನು ವಶಪಡಿಸಿಕೊಂಡನು. ಈ ಅಂಶಗಳು ಒಂಟೆ, ಎತ್ತು ಹಾಗೂ ಕತ್ತೆಗಳು ವಸ್ತುಸಾಕಾಣಿಕೆಯ ಪೋಷಕ ಸೈನ್ಯವಾಗಿತ್ತೆಂದು ತಿಳಿಸುತ್ತವೆ.

ಹೀಗೆ ಮೈಸೂರು ಒಡೆಯರ ಕಾಲದಲ್ಲಿ ಸೈನ್ಯ ವ್ಯವಸ್ಥೆಯು ಬದಲಾದ ಕಾಲಘಟ್ಟ, ಪರಿಸರ ಮತ್ತು ಆಡಳಿತಗಾರರ ಮನಸ್ಥಿತಿಗೆ ಹಾಗೂ ಯೋಜನೆಗಳಿಗೆ ಅನುಗುಣವಾಗಿ ಬದಲಾಯಿತು. ಮೈಸೂರಿನ ಹಳೆಯ ಸಾಂಪ್ರದಾಯಿಕ ವ್ಯವಸ್ಥೆಯ ಜೊತೆಗೆ ಹೊಸ ಆವಿಷ್ಕಾರಗಳು ಸೈನ್ಯ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲು ಕಾರಣೀಭೂತವಾದವು ಎಂದು ತಿಳಿದುಬರುತ್ತದೆ.

**ಕೊನೆ ಟಿಪ್ಪಣಿಗಳು**


1. ಬಸವರಾಧ್ಯ ಎನ್., 1995, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂ–8, ಪು.87.
2. ಸೋಮಶೇಖರ್ ಎಸ್.ವೈ., 2009, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಪು.1.
3. ಮೂರ್ತಿ ಕೆ.ಎಲ್.ಎನ್., 2011, ಪ್ರಾಚೀನ ಭಾರತದ ರಾಜಕೀಯ ವಿಚಾರಗಳು, ಪು.136.
4. ಭಾಷ್ಯಂ ಎಂ.ಎಲ್., (ಅನು) ಮಿರ್ಜಿ ಡಿ.ಆರ್, 2012, ಪ್ರಾಚೀನ ಭಾರತವೆಂಬ ಅದ್ಭುತ, ಪು.43.
5. ವಿಲ್‌ಡ್ಯುರ್ಯಾಂಡ್, 2007, ನಾಗರೀಕತೆಯ ಕಥೆ: ನಮ್ಮ ಪ್ರಾಚ್ಯ ಪರಂಪರೆ, ಪು.93.
6. ಮಹಾದೇವ ನಾ.ಜೋಶಿ, 2011., ಪ್ರಾಚೀನ ಭಾರತೀಯ ರಾಜನೀತಿ, ಪು.183.
7. ಕರ್ನಾಟಕ ಪರಂಪರೆ ಸಂಪುಟ–2, 1970, ಪು.235.
8. ಶಾಮಾಶಾಸ್ತ್ರಿ ಆರ್.(ಸಂ), 1971, ಗೋವಿಂದ ವೈದ್ಯಕೃತ ಕಂಠೀರವ ನರಸರಾಜ ವಿಜಯಂ, ಪು.31.
9. ಅದೇ, ಪು.ಸಂ.31.
10. ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು.32.
12. ರಾಮಕೃಷ್ಣರಾವ್ ಬಿ., 1916, ಶ್ರೀಮನ್ಮಹಾರಾಜರ ವಂಶಾವಳಿ ಭಾಗ–1, ಪು.11
13. ಅದೇ, ಪು.11.

14. ಅದೇ, ಭಾಗ–2, ಪು.18.
15. ಸೋಮಶೇಖರ್ ಎಸ್.ವೈ., ಪೂರ್ವೋಕ್ತ, ಪು.45.
16. ರಾಮಕೃಷ್ಣರಾವ್ ಬಿ., ಪೂರ್ವೋಕ್ತ, ಪು.65
17. ಅದೇ, ಪು.69.
18. ಅದೇ, ಪು.79.
19. ಅದೇ, ಪು.187.
20. ಅದೇ, ಪು.192.
21. ಅದೇ, ಪು.208.
22. ಅದೇ, ಪು.209.
23. ಅದೇ, ಪು.227.
24. ಅದೇ, ಸಂಪುಟ–2, ಪು.15.
25. ಅದೇ, ಪು.ಸಂ.16.
26. ಅದೇ, ಪು.ಸಂ.17.
27. ಪತ್ರಗಾರ ಇಲಾಖೆ, 1940, ಕಿಲ್ಲೆಕಛೇರಿ, ಕಡತ ಸಂಪುಟ–72, –3.
28. ಕಿಲ್ಲೆ ಕಛೇರಿ, 1921.
29. ಶಾಮಾಶಾಸ್ತ್ರಿ ಆರ್.(ಸಂ), ಪೂರ್ವೋಕ್ತ, ಪು.31.
30. ಅದೇ, ಪು.31.
31. ಅದೇ, ಪು.31.
32. ಅದೇ, ಪು.31.
33. ಅದೇ, ಪು.31.
34. ರಾಮಕೃಷ್ಣರಾವ್ ಬಿ., ಪೂರ್ವೋಕ್ತ, ಪು.111.
36. ಸುಧಾಮಣಿ ಬಿ.ವಿ., 2009., ದಳವಾಯಿ ನಂಜರಾಜಯ್ಯನ ಕಾಲದ ಮೈಸೂರು, ಪು.61.
37. ರಾಮಕೃಷ್ಣರಾವ್ ಬಿ., ಪೂರ್ವೋಕ್ತ, ಪು.111.
38. ಕೆಳದಿ ಗುಂಡಾಜೋಯಿಸ್., 1999., ಲಿಂಗಣ್ಣ ಕವಿಯ ಕೆಳದಿ ನೃಪವಿಜಯ., ಪು.48–49
39. ಅದೇ, ಪು.53.
40. ಗೋಪಾಲ್ ಆರ್., 2010., ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ., ಪು.497.
41. ರಾಮಕೃಷ್ಣರಾವ್ ಬಿ., ಪೂರ್ವೋಕ್ತ ಭಾಗ–2., ಪು.16.
42. ಸೋಮಶೇಖರ್ ಎಸ್.ವೈ., ಪೂರ್ವೋಕ್ತ, ಪು.ಸಂ.59.
43. ಅದೇ, ಪು.58–59.
44. ಅದೇ, ಪು.59.
45. ಅದೇ, ಪು.59.
46. ಅದೇ, ಪು.59.
47. ರಾಮಕೃಷ್ಣರಾವ್ ಬಿ., ಪೂರ್ವೋಕ್ತ, ಭಾಗ–1, ಪು.73.
49. ಅದೇ, ಪು.111.
50. ಅದೇ, ಪು.112–113.
51. ಅದೇ, ಪು.183.
52. ಅದೇ, ಭಾಗ–2, ಪು.8.
53. ಅದೇ, ಭಾಗ–1., ಪು.82.
54. ಅದೇ, ಭಾಗ–2., ಪು.90.
55. ಅದೇ, ಭಾಗ–1., ಪು.82.
56. ಗೋಪಾಲ್ ಆರ್.(ಸಂ), ಪೂರ್ವೋಕ್ತ, ಪು.327.
57. ಗೋಪಾಲ್ ಆರ್.(ಸಂ), 2008, ದಿವಾನ್ ಪೂರ್ಣಯ್ಯ, ಪು.111.

58. ಅದೇ, ಪು.112.
59. ರಾಮಕೃಷ್ಣರಾವ್ ಬಿ., ಪೂರ್ವೋಕ್ತ, ಭಾಗ–1., ಪು.82.
60. ಶಿವಕುಮಾರಿ ಎಂ. ಎಸ್., 2017., ಟಿಪ್ಪು ಕೋಟೆಗಳ ರಚನೆ, ತಂತ್ರಜ್ಞಾನ ಮತ್ತು ಮೌಖಿಕ ಕಥನಗಳು, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು.ಸಂ.144.
61. ಅದೇ, ಪು.145.
62. ಅದೇ, ಪು.146.
63. ಅದೇ, ಪು.146.
64. ರೊದ್ದಂ ನರಸಿಂಹ, 1985, ರಾಕೆಟ್ಸ್ ಇನ್ ಮೈಸೂರ್ ಅಂಡ್ ಬ್ರಿಟನ್–1750–1850ಎಡಿ, ಪು.02.
65. ಅದೇ, ಪು.6.
66. ಶಿವಕುಮಾರಿ ಎಂ.ಎಸ್., ಪೂರ್ವೋಕ್ತ, ಪು.146–147.
67. ಅದೇ, ಪು.147.
68. ಅದೇ, ಪು.151.
69. ಸೋಮಶೇಖರ್ ಎಸ್.ವೈ., ಪೂರ್ವೋಕ್ತ, ಪು.136.
70. ಷೇಕ್ ಅಲಿ ಬಿ., 1997, ಕರ್ನಾಟಕ ಚರಿತ್ರೆ ಸಂ–5., ಪು.120.
71. ತಾತಾಚಾರ್ಯ ಶರ್ಮ ತಿರುಮಲೆ, 2006, ಮೈಸೂರಿನ ಇತಿಹಾಸದ ಹಳೆಯ ಪುಟಗಳು, ಪು.17– 18.
72. ಅದೇ, ಪು.18.
73. ಅದೇ, ಪು.18–19.
74. ಷೇಕ್ ಅಲಿ ಬಿ., ಪೂರ್ವೋಕ್ತ, ಪು.481–482.
75. ರಾಜ್‌ಕುಮಾರ್, 1993, ನೇವಲ್ ಅಡ್ವೆಂಚರ್ ಆಫ್ ಟಿಪ್ಪು ಸುಲ್ತಾನ್, ಪು.156.
76. ನಂಬಿಯಾರ್ ಓ.ಕೆ., 1947, ದಿ ಮೈಸೂರು ನೇವಿ, ಪು.26.
77. ಅದೇ, ಪು.29–30.
78. ಇರ್ಫಾನ್ ಹಬೀಬ್, 1999, ಕಾನ್‌ಫ್ರಾಂಟಿಂಗ್ ಕಲೋನಿಯಾಲಿಸಂ ರೆಸಿಸ್ಟೆನ್ಸ್ ಅಂಡ್ ಮಾರ್ಡನೈಸೇಷನ್ ಅಂಡರ್ ಹೈದರ್ ಅಂಡ್ ಟಿಪ್ಪು ಸುಲ್ತಾನ್, ಪು.177.
79. ವಿಶ್ವನಾಥ ಕೆ.ಎಸ್., 2017., ಟಿಪ್ಪು ಸುಲ್ತಾನ್ ಹಾಗೂ ಫ್ರೆಂಚರು : ಮಿಲಿಟರಿ ಮತ್ತು ರಾಜಕಾರಣ ನೆಲೆಯ ಅಧ್ಯಯನ, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಪು.284.
80. ಸೋಮಶೇಖರ್ ಎಸ್.ವೈ., ಪೂರ್ವೋಕ್ತ, ಪು.64.
81. ಅದೇ, ಪು.64.
82. ಅದೇ, ಪು.79.
83. ರಾಮಕೃಷ್ಣರಾವ್, ಪೂರ್ವೋಕ್ತ ಭಾಗ–1, ಪು.128.
86. ಅದೇ, ಪು.228.
87. ಶರ್ಮಾ ತಿ.ತಾ., 1974, ಗೋವಿಂದವೈದ್ಯಕೃತ ಕಂಠೀರವ ನರಸರಾಜ ವಿಜಯಂ, ಪು.13.
88. ರಾಮಕೃಷ್ಣರಾವ್, ಪೂರ್ವೋಕ್ತ ಭಾಗ–1, ಪು.115.